

# ಆಟಗಳು

## ಚಪ್ಪಾಳೆ ಆಟ

**1**

ಅ) ಮಕ್ಕಳನ್ನು ವೃತ್ತಾಕಾರದಲ್ಲಿ ಕೂರಿಸುವುದು. ಒಬ್ಬ ವಿದ್ಯಾರ್ಥಿ ಒಂದು ಎಂದು ಹೇಳುವುದು. ಪಕ್ಕದ ವಿದ್ಯಾರ್ಥಿ 2 ಎಂದು ಹೇಳುವುದು ಹೀಗೆ 3 ಮತ್ತು 4 ಹೇಳಿದ ನಂತರ 5ನೇ ವಿದ್ಯಾರ್ಥಿ 5 ಎಂದು ಹೇಳುವ ಬದಲು ಚಪ್ಪಾಳೆ ತಟ್ಟಬೇಕು ತಟ್ಟುವ ಬದಲು 5 ಎಂದು ಹೇಳಿದರೆ ಆ ವಿದ್ಯಾರ್ಥಿ ಆಟದಿಂದ ಹೊರ ಹೋಗಬೇಕು ನಂತರ ಮತ್ತೆ 1 ರಿಂದ ಅಂಕಿ ಹೇಳಲು ಪ್ರಾರಂಭಿಸಿ ಆಟ ಮುಂದುವರಿಯುವುದು ಕೊನೆಗೆ ಉಳಿದ ವಿದ್ಯಾರ್ಥಿ ಆಟದಲ್ಲಿ ಗೆದ್ದಂತೆ.

**ಕವಡೆ ಆಟ :** ಶಿಕ್ಷಕರು ಕವಡೆಗಳನ್ನು ಕೈಯಲ್ಲಿ ಮುಚ್ಚಿಕೊಂಡು ಕುಲುಕುತ್ತಾ ಒಂದು ಕೈಯಲ್ಲಿ 5ರ ಒಳಗೆ ಎಷ್ಟಾದರೂ ಕವಡೆಗಳನ್ನು ಮುಚ್ಚಿಕೊಂಡು ಎಷ್ಟೆಂದು ಒಬ್ಬ ವಿದ್ಯಾರ್ಥಿಯನ್ನು ಕೇಳುವುದು, ವಿದ್ಯಾರ್ಥಿ ಊಹಿಸಿ ಹೇಳುವನು. ನಂತರ ಅಂಗೈ ಬಿಚ್ಚಿ ತೋರಿಸಿ ಕವಡೆ ಎಣಿಸಿ ಹೇಳಲು ತಿಳಿಸುವುದು. ಸರಿಯಾಗಿ ಹೇಳಿದ ವಿದ್ಯಾರ್ಥಿಗೆ ಮೆಚ್ಚುಗೆ ಸೂಚಿಸುವುದು. ತಪ್ಪು ಹೇಳಿದರೆ ಎಣಿಸಿ ಹೇಳುವುದು.

# ಆಟಗಳು
## (ಹತ್ತಿರ, ತುಂಬಾ ಹತ್ತಿರ)

**2**

**ಉದ್ದೇಶ :** ಹತ್ತಿರ, ತುಂಬಾ ಹತ್ತಿರದ ಕಲ್ಪನೆ ಮೂಡಿಸುವುದು.

**ಕಲಿಸುವ ಕ್ರಮ :** ಒಬ್ಬ ವಿದ್ಯಾರ್ಥಿಯನ್ನು ಕೇಂದ್ರವಾಗಿಟ್ಟುಕೊಂಡು ಆ ವಿದ್ಯಾರ್ಥಿಗೆ ಹತ್ತಿರದಲ್ಲಿ ಮತ್ತು ಸ್ವಲ್ಪ ದೂರದಲ್ಲಿ ಇಬ್ಬರು ವಿದ್ಯಾರ್ಥಿಗಳನ್ನು ನಿಲ್ಲಿಸುವುದು. ಕೇಂದ್ರ ಸ್ಥಾನದಲ್ಲಿರುವ ವಿದ್ಯಾರ್ಥಿಗೆ ಯಾರು ಹತ್ತಿರದಲ್ಲಿ ಇದ್ದಾರೆ? ಯಾರು ದೂರದಲ್ಲಿದ್ದಾರೆ? ಎಂದು ಮಕ್ಕಳನ್ನು ಕೇಳಿ ಉತ್ತರ ಪಡೆಯುವುದು. ಕೇಂದ್ರ ಸ್ಥಾನದಲ್ಲಿರುವ ವಿದ್ಯಾರ್ಥಿಗೆ ಹತ್ತಿರದಲ್ಲಿರುವ ವಿದ್ಯಾರ್ಥಿಯನ್ನು ಆಧಾರವಾಗಿಟ್ಟುಕೊಂಡು ಹತ್ತಿರ ಎಂದು ಪರಿಚಯಿಸಿ ಇವರಿಬ್ಬರ ನಡುವೆ ಮತ್ತೊಬ್ಬ ವಿದ್ಯಾರ್ಥಿಯನ್ನು ನಿಲ್ಲಿಸಿ ಕೇಂದ್ರ ಸ್ಥಾನಕ್ಕೆ ಸ್ವಲ್ಪ ಹತ್ತಿರದಲ್ಲಿ ಇದ್ದಾನೆ ಎಂದು ಹೇಳಿ ಮಕ್ಕಳಿಂದ ಹೇಳಿಸುವುದು. ಇದೇ ರೀತಿ ಹಲವು ಬಾರಿ ಚಟುವಟಿಕೆ ಮಾಡಿಸುತ್ತಾ ಹತ್ತಿರ, ತುಂಬಾ ಹತ್ತಿರ, ಕಲ್ಪನೆ ಮೂಡಿಸುವುದು.



# ಆಟಗಳು
## (ದೂರ, ತುಂಬಾ ದೂರ)

**4**

**ಉದ್ದೇಶ :** ದೂರ, ತುಂಬಾ ದೂರ ಇವುಗಳ ಬಗ್ಗೆ ಅರಿವು ಮೂಡಿಸುವುದು.

**ಕಲಿಸುವ ಕ್ರಮ :** ಒಬ್ಬ ವಿದ್ಯಾರ್ಥಿಯನ್ನು ಕೇಂದ್ರವಾಗಿಟ್ಟುಕೊಂಡು ಆ ವಿದ್ಯಾರ್ಥಿಗೆ ಹತ್ತಿರದಲ್ಲಿ ಮತ್ತು ದೂರದಲ್ಲಿ ಇಬ್ಬರು ವಿದ್ಯಾರ್ಥಿಗಳನ್ನು ನಿಲ್ಲಿಸುವುದು. ಕೇಂದ್ರ ಸ್ಥಾನದಲ್ಲಿರುವ ವಿದ್ಯಾರ್ಥಿಗೆ ಯಾರು ಹತ್ತಿರದಲ್ಲಿ ಇದ್ದಾರೆ ಯಾರು ದೂರದಲ್ಲಿದ್ದಾರೆ ಎಂದು ಕೇಳಿ ಮಕ್ಕಳಿಂದ ಉತ್ತರ ಪಡೆಯುವುದು.

2. ಕೇಂದ್ರ ಸ್ಥಾನದಲ್ಲಿರುವ ವಿದ್ಯಾರ್ಥಿಗೆ ದೂರದಲ್ಲಿರುವ ವಿದ್ಯಾರ್ಥಿಯನ್ನು ಆಧಾರವಾಗಿಟ್ಟುಕೊಂಡು ದೂರ ಎಂದು ಪರಿಚಯಿಸಿ ಈ ವಿದ್ಯಾರ್ಥಿಯ ನಂತರ ಮತ್ತೊಬ್ಬ ವಿದ್ಯಾರ್ಥಿಯನ್ನು ನಿಲ್ಲಿಸಿ ಕೇಂದ್ರ ಸ್ಥಾನಕ್ಕೆ ತುಂಬಾ ದೂರದಲ್ಲಿದ್ದಾನೆ ಎಂದು ಹೇಳಿ ಮಕ್ಕಳಿಂದ ಹೇಳಿಸುವುದು. ಇದೇ ರೀತಿ ಹಲವು ಬಾರಿ ಚಟುವಟಿಕೆ ಮಾಡುಸುತ್ತಾ ಹತ್ತಿರ, ದೂರ, ತುಂಬಾದೂರದ ಕಲ್ಪನೆ ಮೂಡಿಸುವುದು.



ಕೇಂದ್ರ | ಹತ್ತಿರ | ದೂರ | ತುಂಬಾ ದೂರ

1



# ಹಾಡು

13

**ಸೂಚನೆ :** ಮಕ್ಕಳನ್ನು ವೃತ್ತಾಕಾರವಾಗಿ ನಿಲ್ಲಿಸಿ ಈ ಹಂತಕ್ಕೆ ಬಂದ ವಿದ್ಯಾರ್ಥಿಗೆ ಹೆಚ್ಚು ಗಮನ ಹರಿಸುತ್ತ ಶಿಕ್ಷಕರು ಸರಳ ಅಭಿನಯದ ಮೂಲಕ ಹಾಡನ್ನು ಹೇಳುತ್ತ ಹೇಳಿಸುವುದು.

ಎಣಿಸಿ ಹತ್ತರಿಂದ ಇಪ್ಪತ್ತು
ಮಾಡುವೆ ಆಗ ಕಸರತ್ತು

ಇಪ್ಪತ್ತರಿಂದ ಮೂವತ್ತು
ಆರೋಗ್ಯಕ್ಕೆ ಇಲ್ಲ ಆಪತ್ತು

ಮುವತ್ತರಿಂದ ನಲವತ್ತು
ಬೇಕು ನಮಗೆ ತಾಕತ್ತು

ನಲವತ್ತರಿಂದ ಐವತ್ತು
ಸಂಖ್ಯೆಯೇ ಬಾಳಿನ ಸಂಪತ್ತು

ಹೀಗೆ ಹತ್ತರಿಂದ ಐವತ್ತು
ಸಂಖ್ಯೆಗಳಾಟವು ಮುಗಿದಿತ್ತು




# ಎಣಿಕೆ ಮತ್ತು ಬರವಣಿಗೆ

**14**

**ಉದ್ದೇಶ** : 20 ರಿಂದ 50 ರವರೆಗಿನ ಸಂಖ್ಯೆಗಳ ಎಣಿಕೆ ಮತ್ತು ಬರವಣಿಗೆ ಕಲಿಸುವುದು.

**ಸಾಮಗ್ರಿ** : ಬಿಡಿ ಕಡ್ಡಿಗಳು, ಹತ್ತರ ಕಡ್ಡಿಯ ಕಟ್ಟುಗಳು, ಮಣಿಗಳು, 20 ರಿಂದ 50 ರವರೆಗಿನ ಸಂಖ್ಯೆಗಳ ಮಿಂಚುಪಟ್ಟಿಗಳು.

**ಕಲಿಸುವ ಕ್ರಮ :**

**ಚಟುವಟಿಕೆ : 1**

1. ಒಂದು ಹತ್ತರ ಕಡ್ಡಿ ಕಟ್ಟನ್ನು ನೆಲದ ಮೇಲಿಟ್ಟು ಅದರ ಮುಂದೆ ಒಂದೊಂದೇ ಕಡ್ಡಿಗಳನ್ನು ಸೇರಿಸುತ್ತಾ 11 ರಿಂದ 19ರವರೆಗೆ ಹೇಳಿ ಮಕ್ಕಳಿಂದ ಹೇಳಿಸುತ್ತಾ ಚಟುವಟಿಕೆ ಮಾಡಿಸುವುದು.
2. ಹತ್ತೊಂಬತ್ತಕ್ಕೆ ಮತ್ತೊಂದು ಕಡ್ಡಿ ಸೇರಿಸಿ, 2 ಹತ್ತರ ಕಟ್ಟನ್ನು ಕಟ್ಟಿಸುವುದು 2 ಹತ್ತುಗಳು 20 ಎಂದು ಹೇಳಿ ಹೇಳಿಸುವುದು ಮತ್ತು ವಿದ್ಯಾರ್ಥಿಗಳಿಂದ ಬರೆಸುವುದು.
3. 2 ಹತ್ತರ ಕಟ್ಟಿನ ಮುಂದೆ ಒಂದೊಂದೇ ಕಡ್ಡಿಗಳನ್ನು ಸೇರಿಸುತ್ತಾ 21 ರಿಂದ 50ರ ವರೆಗೆ ಎಣಿಸುವ ಮತ್ತು ಬರೆಸುವ ಚಟುವಟಿಕೆ ಮಾಡಿಸುವುದು.
4. ಹೇಳಿದ ಸಂಖ್ಯೆಗೆ ಅನುಗುಣವಾಗಿ ಹತ್ತರ ಕಟ್ಟು ಮತ್ತು ಬಿಡಿ ಕಡ್ಡಿಗಳನ್ನು ಗುಂಪಿನಿಂದ ತೆಗೆದುಕೊಡುವ ಚಟುವಟಿಕೆ ಮಾಡಿಸುವುದು.
5. ವಿದ್ಯಾರ್ಥಿಗಳಿಗೆ ಸಂಖ್ಯೆಗಳ ಮಿಂಚುಪಟ್ಟಿ ಕೊಟ್ಟು ಹತ್ತು ಬಿಡಿಗಳಾಗಿ ಬರೆಯಲು ಹೇಳಿ ಬರೆಸುವುದು.
6. 1 ರಿಂದ 50ರವರೆಗೆ ಹೇಳುತ್ತಾ ಬರೆಸುವುದು.

**ಚಟುವಟಿಕೆ - 2**

ಮಣಿಕಟ್ಟನ್ನು ಬಳಸಿಕೊಂಡು 20 ರಿಂದ 50 ರವರೆಗಿನ ಸಂಖ್ಯೆಗಳ ಎಣಿಕೆ ಮತ್ತು ಬರವಣಿಗೆಗಳನ್ನು ಕಲಿಸುವುದು.

**ಶಿಕ್ಷಕರ ಗಮನಕ್ಕೆ :** ವಿದ್ಯಾರ್ಥಿಗಳಿಗೆ ಮೇಲಿನ ಚಟುವಟಿಕೆ ಮಾಡಿಸಿ 1 ರಿಂದ 50ರವರೆಗಿನ ಸಂಖ್ಯೆಗಳನ್ನು ನೋಟ್‌ಪುಸ್ತಕದಲ್ಲಿ ಬರೆಸಿ ಕಲಿಕಾಂಶದ ಸಂಪೂರ್ಣ ಮನವರಿಕೆ ಮಾಡಿಸಿದ ನಂತರವೇ ಅಭ್ಯಾಸ ಚಟುವಟಿಕೆಯಲ್ಲಿ ತೊಡಗಿಸುವುದು.

| 1 | # ಎಣಿಕೆ ಬರವಣಿಗೆ | 19 |
|---|---|---|

**ಉದ್ದೇಶ** : ಹತ್ತರ ಸ್ಥಾನ ಬೆಲೆಯನ್ನು ಪರಿಚಯಿಸುವುದು.

**ಸಾಮಗ್ರಿ** : 2 ಕಡ್ಡಿಗಳಿರುವ ಮಣಿಕಟ್ಟು, 9 ನೀಲಿ ಬಣ್ಣದ ಮಣಿಗಳು, 5 ಕೆಂಪು ಬಣ್ಣದ ಮಣಿಗಳು.

**ವಿಧಾನ** : ಮಣಿಕಟ್ಟನ್ನು ತೆಗೆದುಕೊಂಡು ಬಿಡಿಸ್ಥಾನದ ಕಡ್ಡಿಗೆ ನೀಲಿ ಬಣ್ಣದ ಮಣಿಗಳನ್ನು ಒಂದೊಂದನ್ನು ಎಣಿಸುತ್ತಾ ಹಾಕುವುದು. 9 ಮಣಿಗಳನ್ನು ಹಾಕಿದ ಮೇಲೆ ಹತ್ತನೇ ಮಣಿಯನ್ನು ಹಾಕಲು ಜಾಗವಿರುವುದಿಲ್ಲ.

ಆಗ ಒಂದು ಕೆಂಪು ಬಣ್ಣದ ಮಣಿಗಳಲ್ಲಿ ಒಂದನ್ನು ಹತ್ತರ ಸ್ಥಾನದ ಕಡ್ಡಿಗೆ ಹಾಕಿಸಬೇಕು. ಮತ್ತು ಬಿಡಿಸ್ಥಾನದಲ್ಲಿದ್ದ ಎಲ್ಲಾ ಮಣಿಗಳನ್ನು ವಾಪಸ್ ತೆಗೆಸಬೇಕು. ಒಂದು ಕೆಂಪು ಮಣಿ 10 ನೀಲಿ ಮಣಿಗಳಿಗೆ ಸಮ ಎಂದು ಹೇಳಬೇಕು.

ಮತ್ತೆ ಬಿಡಿಸ್ಥಾನದ ಕಡ್ಡಿಗೆ ಒಂದು ನೀಲಿ ಮಣಿ ಹಾಕಿ 10+1=11 ಎಂದು ಹೇಳಿಸಿ ಇದೇ ರೀತಿ ಮಣಿಗಳನ್ನು 19ರವರೆಗೂ ಹಾಕಿಸಬೇಕು. ಇದೇ ರೀತಿ 50ರವರೆಗೆ ಚಟುವಟಿಕೆ ಮಾಡಿಸಬೇಕು.

**ಸೂಚನೆ :**

1) ಮಣಿಕಟ್ಟಿನ ಕಡ್ಡಿ 9 ಮಣಿಗಳನ್ನು ಮಾತ್ರ ಹಿಡಿಯುವಂತಿರಬೇಕು.
2) ಈ ಚಟುವಟಿಕೆಯನ್ನು ಹಲವಾರು ಬಾರಿ ಮಾಡಿಸಿ ಕಲ್ಪನೆ ಮೂಡಿಸಬೇಕು.
3) ಸಾಮರ್ಥ್ಯಕ್ಕೆ ಪೂರಕವಾದ ಬೇರೆ ಬೇರೆ ಚಟುವಟಿಕೆ ಮಾಡಿಸಬಹುದು.

**ಶಿಕ್ಷಕರ ಗಮನಕ್ಕೆ :** ಶಿಕ್ಷಕರು ಈ ಹಂತಕ್ಕೆ ಬಂದ ವಿದ್ಯಾರ್ಥಿಗೆ ಸ್ಥಾನ ಬೆಲೆಯ ಪರಿಕಲ್ಪನೆಯನ್ನು ಹಲವು ಚಟುವಟಿಕೆಗಳ ಮೂಲಕ ಮೂಡಿಸಿದ ನಂತರ, ನೋಟ್ ಪುಸ್ತಕದಲ್ಲಿ ಕೆಲವು ಲೆಕ್ಕಗಳನ್ನು ಮಾಡಿಸಿ, ಕಲಿಕಾಂಶದ ಸಂಪೂರ್ಣ ಮನವರಿಕೆಯಾದ ನಂತರವೇ ಮುಂದಿನ ಹಂತಕ್ಕೆ ಕಳಿಸುವುದು.




# ಎಣಿಕೆ ಮತ್ತು ಬರವಣಿಗೆ
## (20 ರಿಂದ 50)

**23**

### ಶಿಕ್ಷಕರ ಕಾರ್ಡ್

| | | | | |
|---|---|---|---|---|
| 21 | 36 | 28 | 49 | 25 |
| 43 | 22 | 31 | 40 | 33 |
| 34 | 42 | 23 | 35 | 24 |
| 27 | 38 | 44 | 45 | 50 |
| 48 | 39 | 29 | 32 | 41 |



1

# ಆಶ ಆಟ

23

**ಆಟ ಆಡುವ ಕ್ರಮ :**

- ಈ ಆಟದಲ್ಲಿ 2 ರೀತಿಯ ಕಾರ್ಡ್‌ಗಳಿರುತ್ತವೆ. ಮೊದಲನೇ ಕಾರ್ಡ್, ನಂತರದ 4 ಕಾರ್ಡ್ ಮಕ್ಕಳ ಕಾರ್ಡುಗಳು.
- ಈ ಹಂತಕ್ಕೆ ಬಂದ ಮಕ್ಕಳಿಗೆ, ಮಕ್ಕಳ ಕಾರ್ಡುಗಳನ್ನು ನೀಡಿ ಅಲ್ಲಿರುವ ಅಂಕಿಗಳ ಸಂಖ್ಯೆಗಳಿಗೆ ಅನುಗುಣವಾಗಿ ಕಲ್ಲು / ಬೀಜ / ಮಣಿಗಳನ್ನು ನೀಡುವುದು.
- ಶಿಕ್ಷಕ / ಗೆಳೆಯ ಶಿಕ್ಷಕರ ಕಾರ್ಡಿನಲ್ಲಿರುವ ಅಂಕಿಗಳನ್ನು ಅಡ್ಡಸಾಲಿನಲ್ಲಿ ಕ್ರಮವಾಗಿ ಹೇಳುವುದು.
- ಶಿಕ್ಷಕ / ಗೆಳೆಯ ಹೇಳಿದ ಅಂಕಿಯನ್ನು ಆಲಿಸಿದ ಮಕ್ಕಳು ತಮ್ಮ ಕಾರ್ಡಿನಲ್ಲಿನ ಅಂಕಿಯ ಮೇಲೆ ಬೀಜವನ್ನು ಇಡುವುದು.
- ಕಾರ್ಡ್‌ನಲ್ಲಿನ ಎಲ್ಲಾ ಅಂಕಿಗಳ ಮೇಲೆ ಕಲ್ಲು / ಬೀಜಗಳನ್ನು ಮೊದಲು ಇಟ್ಟ ಮಗು ಆಟದಲ್ಲಿ ಗೆದ್ದಂತೆ.
- ಗೆದ್ದ ಮಕ್ಕಳನ್ನು ಪ್ರೋತ್ಸಾಹಿಸುವುದು ಮತ್ತು ತಪ್ಪಾಗಿದ್ದಲ್ಲಿ ಕಾರಣ ತಿಳಿದು ಸುಧಾರಣೆಗಾಗಿ ಪರಿಹಾರ ಕ್ರಮ ಕೈಗೊಳ್ಳುವುದು.



b

1



# ಆಶ ಆಟ

23

| | | | | |
|---|---|---|---|---|
| 32 | 36 | 28 | ❁ | 49 |
| 43 | 22 | ❁ | 31 | 40 |
| 34 | ❁ | 42 | ❁ | 23 |
| 35 | 27 | ❁ | 38 | 44 |
| 45 | 48 | 39 | 29 | 21 |

1



# ಆಶ ಆಟ

23

| | | | | |
|---|---|---|---|---|
| 29 | 35 | ❁ | 27 | 48 |
| 34 | 38 | 24 | 39 | 42 |
| ❁ | 43 | ❁ | 23 | ❁ |
| 21 | 36 | 31 | 49 | 25 |
| 28 | 22 | ❁ | 40 | 33 |




# ಆಶ ಆಟ

23

| | | | | |
|---|---|---|---|---|
| 44 | 29 | 41 | 32 | ❁ |
| 50 | 35 | 45 | ❁ | 42 |
| 23 | 34 | ❁ | 43 | 21 |
| 36 | ❁ | 22 | 31 | 28 |
| ❁ | 49 | 33 | 40 | 25 |




# ಆಶ ಆಟ



| | | | | |
|---|---|---|---|---|
| 41 | 50 | 32 | 29 | 44 |
| 39 | ✽ | 45 | ✽ | 48 |
| 38 | 27 | ✽ | 33 | 40 |
| 25 | ✽ | 49 | ✽ | 31 |
| 28 | 36 | 21 | 43 | 22 |

1 

# ಮೌಲ್ಯಮಾಪನ
## (ಎಣಿಕೆ ಬರವಣಿಗೆ)

**24**

**ಸೂಚನೆ :** 1 ರಿಂದ 50 ರವರೆಗಿನ ಸಂಖ್ಯೆಗಳನ್ನು ನೋಟ್‌ಪುಸ್ತಕದಲ್ಲಿ ಬರೆಯಿರಿ.

| | | | | |
|---|---|---|---|---|
| 1 | 11 | 21 | 31 | 41 |
| 2 | | | | |
| 3 | | | | |
| 4 | | | | |
| 5 | | | | |
| 6 | | | | |
| 7 | | | | |
| 8 | | | | |
| 9 | | | | |
| 10 | | | | |

1 

# ಮೌಲ್ಯಮಾಪನ
## (ಎಣಿಕೆ ಬರವಣಿಗೆ)

25

ಕೆಳಗೆ ನೀಡಿರುವ ಸಂಖ್ಯೆಗಳ ಸ್ಥಾನಬೆಲೆಯನ್ನು ನೋಟ್‌ಪುಸ್ತಕದಲ್ಲಿ ಬರೆ.

1) 48 — 4ರ ಸ್ಥಾನ ಬೆಲೆ ..................
8ರ ಸ್ಥಾನ ಬೆಲೆ ..................

2) 27 — 2ರ ಸ್ಥಾನ ಬೆಲೆ ..................
7ರ ಸ್ಥಾನ ಬೆಲೆ ..................

3) 19 — 1ರ ಸ್ಥಾನ ಬೆಲೆ ..................
9ರ ಸ್ಥಾನ ಬೆಲೆ ..................

4) 32 — 3ರ ಸ್ಥಾನ ಬೆಲೆ ..................
2ರ ಸ್ಥಾನ ಬೆಲೆ ..................

5) 41 — 4ರ ಸ್ಥಾನ ಬೆಲೆ ..................
1ರ ಸ್ಥಾನ ಬೆಲೆ ..................

**ಸೂಚನೆ :** ಕೆಳಗೆ ನೀಡಿರುವ ಸಂಖ್ಯೆಗಳನ್ನು ಸ್ಥಾನಬೆಲೆಯಲ್ಲಿ ವಿಸ್ತರಿಸಿ ನೋಟ್‌ಪುಸ್ತಕದಲ್ಲಿ ಬರೆ.

| ಸಂಖ್ಯೆ | ಹತ್ತು | ಬಿಡಿ | ಸಂಖ್ಯೆ | ಹತ್ತು | ಬಿಡಿ |
|---|---|---|---|---|---|
| 20 | | | 34 | | |
| 21 | | | 35 | | |
| 22 | | | 36 | | |
| 23 | | | 37 | | |
| 24 | | | 38 | | |
| 25 | | | 39 | | |
| 26 | | | 40 | | |
| 27 | | | 41 | | |
| 28 | | | 42 | | |
| 29 | | | 43 | | |
| 30 | | | 44 | | |
| 31 | | | 45 | | |
| 32 | | | 46 | | |
| 33 | | | 47 | | |

2



# ಹೊರಾಂಗಣ
## (ಹಿಂದೆ ಮುಂದೆ ಮಧ್ಯೆ)

26

**ಉದ್ದೇಶ** : ನಿರ್ದಿಷ್ಟ ಸಂಖ್ಯೆಯ ಹಿಂದಿನ ಮತ್ತು ಮುಂದಿನ ಸಂಖ್ಯೆಯನ್ನು ಹೇಳುವ ಮತ್ತು ಅನುಕ್ರಮವಾದ ಯಾವುದಾದರೂ ಮೂರು ಸಂಖ್ಯೆಯನ್ನು ಹೇಳುವ ಅಭ್ಯಾಸ ಮಾಡಿಸುವುದು.

**ಚಟುವಟಿಕೆ : 1**

**ಕಲಿಸುವ ಕ್ರಮ :**

1. 10 ಮಕ್ಕಳನ್ನು ಸಾಲಾಗಿ ನಿಲ್ಲಿಸಿ 1 ರಿಂದ 10ರ ವರೆಗೆ ಅಂಕಿಗಳನ್ನು ಹೇಳಿಸುವುದು. ಪ್ರತಿಯೊಬ್ಬರು ತಾವು ಹೇಳಿದ ಅಂಕಿಯನ್ನು ನೆನಪಿಟ್ಟುಕೊಳ್ಳಲು ಹೇಳುವುದು.
2. ಶಿಕ್ಷಕರು 9 ಎಂದು ಹೇಳಿದಾಗ, ಆ ಅಂಕಿಯನ್ನು ಹೇಳಿರುವ ವಿದ್ಯಾರ್ಥಿ ಅಂಕಿಯನ್ನು ಹೇಳುತ್ತ ಎದುರಿಗೆ ಬಂದು ನಿಲ್ಲಲು ಸೂಚನೆ ನೀಡುವುದು.
3. ಈ ವಿದ್ಯಾರ್ಥಿಯ ಹಿಂದೆ 8 ಎಂದು ಹೇಳಿರುವ ಹಾಗೂ ಮುಂದೆ 10 ಎಂದು ಹೇಳಿರುವ ವಿದ್ಯಾರ್ಥಿಗಳು ಅಂಕಿಯನ್ನು ಹೇಳುತ್ತ ಬಂದು ನಿಲ್ಲುವಂತೆ ಸೂಚನೆ ನೀಡಿ ಚಟುವಟಿಕೆ ಮಾಡಿಸುವುದು.

**ಚಟುವಟಿಕೆ 2 :** ಆಟ

1. ಈ ಆಟವನ್ನು ಗರಿಷ್ಠ 11 ಮಕ್ಕಳು ಆಡಬಹುದಾಗಿದ್ದು, ಅವರಲ್ಲಿ ಒಬ್ಬನು ಹಿಡಿಯುವವನಾಗಿರುತ್ತಾನೆ.
2. ತಲಾ 10 ನಡಿಗೆ ಹೆಜ್ಜೆಯ ಅಳತೆಯ ಅಂತರದಲ್ಲಿ ಮೂರು ಸಮಾನಾಂತರ ಗೆರೆ ಎಳೆಯಬೇಕು.
3. ಮಧ್ಯದ ಗೆರೆಯ ಮೇಲೆ 10 ಮಕ್ಕನ್ನು ನಿಲ್ಲಿಸಿ, ತಾವು ಹೇಳುವ ಅಂಕೆಯನ್ನು ನೆನಪಿನಲ್ಲಿಟ್ಟುಕೊಳ್ಳುವಂತೆ ಸೂಚನೆ ನೀಡಿ, 1 ರಿಂದ 10ರವರೆಗೆ ಅನುಕ್ರಮವಾಗಿ ಹೇಳಿಸುವುದು ಮತ್ತು ಅವರ ಎದುರಿನ ಸಾಲಿನಲ್ಲಿ ಹಿಡಿಯಲು ಸಿದ್ಧವಿರುವ ವಿದ್ಯಾರ್ಥಿಯನ್ನು ನಿಲ್ಲಿಸುವುದು.
4. ಉಪಾಧ್ಯಾಯರು ಸೀಟಿ ಊದಿದ ತಕ್ಷಣ ಹಿಡಿಯುವ ವಿದ್ಯಾರ್ಥಿ ಮಕ್ಕಳನ್ನು ಹಿಡಿಯಲು ಮುಂದಾದಂತೆ, ಅವರು ಹಿಂದೆ ಇರುವ ಗೆರೆಯನ್ನು ಓಡಿ ಮುಟ್ಟಬೇಕು. ಮುಟ್ಟುವುದರೊಳಗೆ ಯಾರಾದರೂ ಸಿಕ್ಕಿಬಿದ್ದರೆ ಅವರು ಔಟ್ ಆದಂತೆ, ಹಿಡಿದ ವಿದ್ಯಾರ್ಥಿಯು ಸಿಕ್ಕಿಬಿದ್ದ ವಿದ್ಯಾರ್ಥಿಯಿಂದ ಆತನ ಕ್ರಮ ಸಂಖ್ಯೆ ತಿಳಿದುಕೊಳ್ಳಬೇಕು.
5. ಔಟಾದ ವಿದ್ಯಾರ್ಥಿ ಹಿಡಿಯುವ ಸ್ಥಾನದಲ್ಲಿ ನಿಲ್ಲುತ್ತಾನೆ. ಅಂತೆಯೇ ಉಳಿದ ವಿದ್ಯಾರ್ಥಿಗಳು ಮಧ್ಯದ ಸಾಲಿನಲ್ಲಿ ತಾವು ಹೇಳಿದ್ದ ಅಂಕಿಗೆ ಅನುಗುಣವಾಗಿ ನಿಲ್ಲುವಂತೆ ಸೂಚನೆ ನೀಡಿ, ವೀಕ್ಷಣೆ ಮಾಡುವುದು. ಇದೇ ರೀತಿ ಆಟ ಮುಂದುವರಿಯುವುದು.

**ಸೂಚನೆ :** ಉದ್ದೇಶದ ಸಾಧನೆಗೆ ಬೇಕಾದ ಸಂಖ್ಯೆಗಳನ್ನು ಬಳಸಿ ಆಟವಾಡಿಸುವುದು.

2

# ಹಿಂದೆ ಮುಂದೆ ಮಧ್ಯೆ

27

**ಉದ್ದೇಶ** : ನಿರ್ದಿಷ್ಟ ಸಂಖ್ಯೆಯ ಹಿಂದಿನ ಮತ್ತು ಮುಂದಿನ ಸಂಖ್ಯೆಯನ್ನು ಹೇಳುವ ಮತ್ತು ಅನುಕ್ರಮವಾದ ಯಾವುದಾದರೂ ಮೂರು ಸಂಖ್ಯೆಗಳಲ್ಲಿ ನಡುವೆ ಇರುವ ಸಂಖ್ಯೆಯನ್ನು ಹೇಳುವ ಮತ್ತು ಬರೆಯುವ ಸಾಮರ್ಥ್ಯ ಬೆಳೆಸುವುದು.

**ಸಾಮಗ್ರಿ** : 1 ರಿಂದ 50 ರವರೆಗಿರುವ ಮಿಂಚು ಪಟ್ಟಿಗಳು

**ಕಲಿಸುವ ಕ್ರಮ :**

1. ಮಿಂಚು ಪಟ್ಟಿಗಳ ಗುಂಪಿನಿಂದ ಒಂದೊಂದು ಮಿಂಚುಪಟ್ಟಿ ತೆಗೆದುಕೊಳ್ಳಲು ವಿದ್ಯಾರ್ಥಿಗಳಿಗೆ ಸೂಚನೆ ನೀಡುವುದು.
2. ತಾವು ತೆಗೆದುಕೊಂಡ ಮಿಂಚುಪಟ್ಟಿಯಲ್ಲಿನ ಸಂಖ್ಯೆಯ ಹಿಂದಿನ ಸಂಖ್ಯೆಯನ್ನು ಮಿಂಚುಪಟ್ಟಿಯ ಗುಂಪಿನಿಂದ ತೆಗೆದು ಸೇರಿಸಲು ಹೇಳುವುದು.
3. ಅಂತೆಯೇ ಮೊದಲು ಮಿಂಚುಪಟ್ಟಿಯಲ್ಲಿನ ಸಂಖ್ಯೆಯ ಮುಂದಿನ ಸಂಖ್ಯೆಯನ್ನು ಮಿಂಚುಪಟ್ಟಿಯ ಗುಂಪಿನಿಂದ ತೆಗೆದು ಸರಿಯಾದ ಜಾಗದಲ್ಲಿ ಇಡಲು ಹೇಳುವುದು ಮತ್ತು ಬರೆಸುವುದು.

**ಸೂಚನೆ :** ವಿದ್ಯಾರ್ಥಿಯು ತೆಗೆದುಕೊಂಡ ಮಿಂಚುಪಟ್ಟಿಯಲ್ಲಿರುವ ಸಂಖ್ಯೆಯನ್ನು ಆಧಾರವಾಗಿಟ್ಟುಕೊಂಡು ಅದರ ಮುಂದಿನ ಮತ್ತು ಹಿಂದಿನ ಸಂಖ್ಯೆಗಳನ್ನು ಮಕ್ಕಳಿಂದ ಹೇಳಿಸುವುದು ಮತ್ತು ಬರೆಸುವುದು.

**ಶಿಕ್ಷಕರ ಗಮನಕ್ಕೆ :** ಶಿಕ್ಷಕರು ಈ ಹಂತಕ್ಕೆ ಬಂದ ವಿದ್ಯಾರ್ಥಿಗಳಿಗೆ ಹಲವು ಲೆಕ್ಕಗಳನ್ನು ನೋಟ್‌ಪುಸ್ತಕದಲ್ಲಿ ಮಾಡಿಸಿ ಕಲಿಕಾಂಶದ ಸಂಪೂರ್ಣ ಮನವರಿಕೆ ಮಾಡಿಸಿದ ನಂತರವೇ ಅಭ್ಯಾಸ ಚಟುವಟಿಕೆಯಲ್ಲಿ ತೊಡಗಿಸುವುದು.

2 

# ಕ್ರಾಫ್ಟ್

**30**

**ಸಾಮಗ್ರಿ** : ಬೆಂಡೆಕಾಯಿ, ದ್ರವರೂಪದ ಬಣ್ಣಗಳು ಮತ್ತು ಬಿಳಿ ಹಾಳೆ.

**ವಿಧಾನ** : ಬೆಂಡೆಕಾಯಿಯನ್ನು ಅರ್ಧಕ್ಕೆ ಕತ್ತರಿಸಿ, ಕತ್ತರಿಸಿದ ಭಾಗವನ್ನು ಬಣ್ಣದಲ್ಲಿ ಅದ್ದಿ ಬಿಳಿ ಹಾಳೆಯ ಮೇಲೆ ಒತ್ತಿಸಿ ಚಿತ್ರಿಸುವ ಚಟುವಟಿಕೆ ಮಾಡಿಸುವುದು. ಮಕ್ಕಳು ತಮ್ಮ ಹಾಳೆಗೆ ಹೆಸರು ಬರೆದು ತರಗತಿಯಲ್ಲಿ ಪ್ರದರ್ಶನಕ್ಕೆ ಇಡುವುದು.

**ಸೂಚನೆ** : ಶಿಕ್ಷಕರು ಹೆಚ್ಚು – ಕಡಿಮೆ, ಕನಿಷ್ಠ – ಗರಿಷ್ಠ ಇವುಗಳ ಕಲಿಕೆಯಲ್ಲಿ ಬಳಸುವ ಅಭ್ಯಾಸದ ಹಾಳೆಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ವ್ಯವಸ್ಥಿತವಾಗಿ ಚಿತ್ರಗಳನ್ನು ಒತ್ತಿಸುವುದು.

**ಶಿಕ್ಷಕರ ಗಮನಕ್ಕೆ** : ಮೇಲಿನ ಚಟುವಟಿಕೆಯಂತೆ, ತೊಂಡೆಕಾಯಿ, ಹೀರೇಕಾಯಿ, ಹಾಗಲಕಾಯಿ, ಆಲೂಗಡ್ಡೆ, ಕ್ಯಾರೆಟ್‌ಗಳನ್ನೂ ಬಳಸಿಕೊಂಡೂ ಈ ಚಟುವಟಿಕೆಯನ್ನು ಮಾಡಿಸಬಹುದು.

2



# ಹೆಚ್ಚು ಕಡಿಮೆ ಸಮ
## (ಚಿಹ್ನೆ ಬಳಸಿ)

31

**ಉದ್ದೇಶ** : 1 ರಿಂದ 50ರವರೆಗಿನ ಅಂಕಿ ಸಂಖ್ಯೆ ಬಳಸಿ ಹೆಚ್ಚು – ಕಡಿಮೆ – ಸಮ ಕಲಿಸುವುದು.

**ಸಾಮಗ್ರಿ** : ಕಲ್ಲು, ಹುಣಿಸೇಬೀಜಗಳು, ಅಂಕಿಗಳ ಮಿಂಚು ಪಟ್ಟಿಗಳು, ಮಣಿಗಳು, ಹೆಚ್ಚು ಕಡಿಮೆ, ಸಮ ಚಿಹ್ನೆಯ ಮಿಂಚುಪಟ್ಟಿಗಳು

**ಕಲಿಸುವ ಕ್ರಮ :**

1. ನೆಲದ ಮೇಲೆ 2 ವೃತ್ತಗಳನ್ನು ಬರೆದು ಒಂದು ವೃತ್ತದಲ್ಲಿ 18 ಕಲ್ಲುಗಳನ್ನು ಮತ್ತೊಂದು ವೃತ್ತದಲ್ಲಿ 14 ಕಲ್ಲುಗಳನ್ನು ಎಣಿಸಿ ಇಡಲು ಮಕ್ಕಳಿಗೆ ಹೇಳುವುದು.
2. ಕಲ್ಲುಗಳ ಸಂಖ್ಯೆಗೆ ಅನುಗುಣವಾಗಿ ವೃತ್ತದ ಮೇಲೆ ಅಂಕೆಯ ಮಿಂಚುಪಟ್ಟಿಯನ್ನು ಇಡಲು ತಿಳಿಸುವುದು.
3. 2 ವೃತ್ತದಲ್ಲಿರುವ ಕಲ್ಲುಗಳಲ್ಲಿ ಯಾವುದು ಹೆಚ್ಚು, ಯಾವುದು ಕಡಿಮೆ ಎಂದು ಕೇಳಿ ಮಕ್ಕಳಿಂದ ಉತ್ತರ ಪಡೆಯುವುದು.
4. ಹೆಚ್ಚು ಕಡಿಮೆ ಚಿಹ್ನೆಯನ್ನು ಮೊಸಳೆ ಬಾಯಿಗೆ ಹೋಲಿಸುತ್ತಾ ಬಾಯಿ ತೆರೆದಿರುವ ಕಡೆ ಇರುವ ಸಂಖ್ಯೆ ಹೆಚ್ಚು ಅಥವಾ ದೊಡ್ಡದು ಎಂದು ತಿಳಿಸಿ, ಇನ್ನೊಂದು ಭಾಗದ ಕಡೆ ಇರುವ ಸಂಖ್ಯೆ ಕಡಿಮೆ ಅಥವಾ ಚಿಕ್ಕದು ಎಂದು ಪರಿಚಯಿಸುತ್ತಾ 2 ಅಂಕಿಗಳ ನಡುವೆ ಚಿಹ್ನೆಯನ್ನು ಸರಿಯಾಗಿ ಹೊಂದುವಂತೆ ಇರಿಸಿ ಚಿಹ್ನೆ ಬಳಸಿ ಓದುವ ಮತ್ತು ಬರೆಯುವ ಚಟುವಟಿಕೆ ಮಾಡಿಸುವುದು.
5. ನೆಲದ ಮೇಲೆ 2 ವೃತ್ತಗಳನ್ನು ಬರೆದು, ಎರಡರಲ್ಲೂ 15ರಂತೆ ಹುಣಸೇ ಬೀಜಗಳನ್ನು ಇಟ್ಟು ಅದಕ್ಕನುಗುಣವಾಗಿ ಅಂಕಿಯ ಮಿಂಚುಪಟ್ಟಿಯನ್ನು ಇಡಿಸುವುದು. ನಂತರ 2 ವೃತ್ತಗಳಲ್ಲೂ ಸಮನಾಗಿ ಹುಣಸೇ ಬೀಜಗಳಿವೆ. ಆದ್ದರಿಂದ ಹದಿನೈದು ಹದಿನೈದಕ್ಕೆ ಸಮ ಎಂದು ತಿಳಿಸುವುದು, ಪರಿಚಯಿಸುತ್ತಾ ಇಡಿಸುವುದು. ಇದೇ ರೀತಿ ಅವೆರಡರ ನಡುವೆ ಸಮ ಚಿಹ್ನೆ ಬಳಸಿ ಓದುವ ಮತ್ತು ಬರೆಯುವ ಚಟುವಟಿಕೆ ಮಾಡಿಸುವುದು.

**ಶಿಕ್ಷಕರ ಗಮನಕ್ಕೆ :** ಈ ಹಂತಕ್ಕೆ ಬಂದ ವಿದ್ಯಾರ್ಥಿಗಳಿಗೆ ಹಲವು ಲೆಕ್ಕಗಳನ್ನು ನೋಟ್‌ಪುಸ್ತಕದಲ್ಲಿ ಮಾಡಿಸಿ ಕಲಿಕಾಂಶದ ಸಂಪೂರ್ಣ ಮನವರಿಕೆ ಮಾಡಿಸಿದ ನಂತರವೇ ಅಭ್ಯಾಸ ಚಟುವಟಿಕೆಯಲ್ಲಿ ತೊಡಗಿಸುವುದು.

2



# ಆಟ

## (ಹೆಚ್ಚು ಕಡಿಮೆ ಸಮ) (1 ರಿಂದ 50 ರವರೆಗೆ)

38

**ಆಟೋಪಕರಣಗಳ ಸಿದ್ಧತೆ :**



1. ¼ ಅಳತೆಯ ಡ್ರಾಯಿಂಗ್ ಹಾಳೆಯ ಮೇಲೆ ಚಿತ್ರದಲ್ಲಿರುವಂತೆ, 33 ಚೌಕಗಳನ್ನು ಹಾಕಬೇಕು. ಚೌಕದ ಅಳತೆ 2.5cm. x 2.5cm. ಇರಲಿ. (ಪದಗಳ ಆಟದ ಬೋರ್ಡ್‌ನಂತೆ)
2. 2.5cm. x 2.5cm. ಅಳತೆಯ 1 ರಿಂದ 50ರವರೆಗಿರುವ ಸಂಖ್ಯೆಗಳ ಎರಡು ಸೆಟ್ ಮಿಂಚುಪಟ್ಟಿಗಳ ಮತ್ತು > < = ಚಿಹ್ನೆ ಇರುವ, ತಲಾ 25 ಮಿಂಚುಪಟ್ಟಿಗಳನ್ನು ತಯಾರಿಸಿಕೊಳ್ಳಬೇಕು.

**ಆಟದ ವಿಧಾನ:**

1. ಆಟದ ಬೋರ್ಡ್‌ನ ಮಧ್ಯದ ಚೌಕವನ್ನು ಬಿಟ್ಟು ಉಳಿದ ಚೌಕಗಳಲ್ಲಿ ಸಂಖ್ಯೆಗಳ ಮಿಂಚುಪಟ್ಟಿಗಳನ್ನು ಇಡಬೇಕು.
2. ಯಾವುದೇ ಒಂದು ಮಿಂಚುಪಟ್ಟಿಯನ್ನು ತೆಗೆದುಕೊಂಡು ಒಂದು ಮಿಂಚುಪಟ್ಟಿಯನ್ನು ದಾಟಿ ಇಡಬೇಕು. ದಾಟುವ ಚೌಕದಲ್ಲಿ ಮಿಂಚುಪಟ್ಟಿ ಇರಲೇಬೇಕು, ಇಡುವ ಮನೆಯು ಖಾಲಿಯಾಗಿರಬೇಕು.
3. ದಾಟಿದ ಮಿಂಚುಪಟ್ಟಿಯನ್ನು ಹೊರಕ್ಕೆ ತೆಗೆದಿಟ್ಟುಕೊಳ್ಳಬೇಕು.
4. ಇದೇ ರೀತಿ ಆಟಗಾರರು ಅನುಕ್ರಮವಾಗಿ ಆಟ ಆಡಿ ಮಿಂಚುಪಟ್ಟಿ ತೆಗೆದಿಟ್ಟುಕೊಳ್ಳಬೇಕು.
5. ಎರಡು ಮಿಂಚುಪಟ್ಟಿಗಳು ದೊರೆತ ಮೇಲೆ ಅವೆರಡರ ನಡುವೆ ಸೂಕ್ತವಾದ ಚಿಹ್ನೆಯನ್ನು ಗುಂಪಿನಿಂದ ಹೊರತೆಗೆದು ಇಡಬೇಕು. ಹಾಗೂ ನೋಟ್‌ಪುಸ್ತಕದಲ್ಲಿ ಬರೆಯಬೇಕು.
6. ಇದೇ ರೀತಿ ಆಟ ಕೊನೆಯಾಗುವ ತನಕ ಆಟ ಆಡಬೇಕು. ಯಾರು ಹೆಚ್ಚು ಸಮಸ್ಯೆಗಳನ್ನು ತಪ್ಪಿಲ್ಲದೆ ಬಿಡಿಸುತ್ತಾರೋ ಅವರು ಪ್ರಥಮ, ಇದೇ ರೀತಿ ದ್ವಿತೀಯ ತೃತೀಯ ಸ್ಥಾನಗಳನ್ನು ಕೊಡುವುದು.

| 2  | # ಹೊರಾಂಗಣ (ಕನಿಷ್ಠ - ಗರಿಷ್ಠ)<br>(1 ರಿಂದ 50 ರವರೆಗೆ) | 39 |
|---|---|---|

**ಉದ್ದೇಶ** : ಕನಿಷ್ಠ – ಗರಿಷ್ಠ ಈ ಕಲ್ಪನೆಯನ್ನು ಮೂಡಿಸುವುದು

**ಕಲಿಸುವ ಕ್ರಮ :**

1. ಮಕ್ಕಳನ್ನು 3 ಗುಂಪುಗಳಾಗಿ ನಿಲ್ಲಲು ಹೇಳುವುದು.

ಉದಾ : 1ನೇ ಗುಂಪಿನಲ್ಲಿ 5, 2ನೇ ಗುಂಪಿನಲ್ಲಿ 7, 3ನೇ ಗುಂಪಿನಲ್ಲಿ 8 ಮಕ್ಕಳು ನಿಲ್ಲುವುದು.

2. ಈ ಹಂತಕ್ಕೆ ಬಂದ ಮಗುವನ್ನು ಕರೆದು ಪ್ರತಿ ಗುಂಪಿನಲ್ಲಿರುವ ಮಕ್ಕಳನ್ನು ಎಣಿಸಲು ಹೇಳಿ ಉತ್ತರ ಪಡೆಯುವುದು.

3. ಮೊದಲು ಮತ್ತು ಎರಡನೆಯ ಗುಂಪುಗಳನ್ನು ತೋರಿಸುತ್ತಾ ಈ ಎರಡು ಗುಂಪುಗಳಲ್ಲಿ ಯಾವುದು ಹೆಚ್ಚು ಮತ್ತು ಯಾವುದು ಕಡಿಮೆ ಎಂದು ಕೇಳಿ ಉತ್ತರ ಪಡೆಯುವುದು.

4. ಎರಡನೆಯ ಗುಂಪು ಮತ್ತು ಮೂರನೆಯ ಗುಂಪನ್ನು ತೋರಿಸುತ್ತಾ ಈ ಎರಡು ಗುಂಪುಗಳನ್ನು ಯಾವುದು ಹೆಚ್ಚು ಯಾವುದು ಕಡಿಮೆ ಎಂದು ಪ್ರಶ್ನಿಸಿ ಉತ್ತರ ಪಡೆಯುವುದು.

5. 3 ಗುಂಪುಗಳನ್ನು ತೋರಿಸುತ್ತಾ ಈ 3 ಗುಂಪುಗಳಲ್ಲಿ ಹೆಚ್ಚು ಕಡಿಮೆ ಹೇಳಲು ಗರಿಷ್ಠ ಕನಿಷ್ಠ ಈ ಪದಗಳನ್ನು ಬಳಸುತ್ತೇವೆಂದು ಹೇಳಿ ಮೂರು ಗುಂಪುಗಳಲ್ಲಿ ಕಡಿಮೆ ಮಕ್ಕಳಿರುವ ಗುಂಪನ್ನು ಕನಿಷ್ಠ ಗುಂಪೆಂದು ಹೆಚ್ಚು ಮಕ್ಕಳಿರುವ ಗುಂಪನ್ನು ಗರಿಷ್ಠ ಗುಂಪೆಂದು ಸಂಖ್ಯೆಗಳನ್ನು ಹೇಳಿಸಿ ಪರಿಚಯ ಮಾಡಿಸುವುದು.

| 2 | # ಕನಿಷ್ಠ - ಗರಿಷ್ಠ<br>(1 ರಿಂದ 50) | 40 |
|---|---|---|



**ಉದ್ದೇಶ** : 1 ರಿಂದ 50ರವರೆಗಿನ ಸಂಖ್ಯೆಗಳಲ್ಲಿ ಕನಿಷ್ಠ - ಗರಿಷ್ಠ ಅಂಕಿ ಸಂಖ್ಯೆಗಳನ್ನು ಪರಿಚಯಿಸುವುದು.

**ಸಾಮಗ್ರಿಗಳು** : ಅಂಕಿ - ಸಂಖ್ಯೆಗಳ ಮಿಂಚುಪಟ್ಟಿಗಳು ಕನಿಷ್ಠ - ಗರಿಷ್ಠ ಎಂದು ಬರೆದಿರುವ ಮಿಂಚುಪಟ್ಟಿ ದೊಡ್ಡ ಬಳೆ ಮತ್ತು ಚಿಕ್ಕ ಬಳೆ.

**ಕಲಿಸುವ ಕ್ರಮ :**

1. ವಿದ್ಯಾರ್ಥಿಗೆ ಸಂಖ್ಯೆಗಳನ್ನು ಬರೆದಿರುವ ಮಿಂಚುಪಟ್ಟಿಗಳನ್ನು ಕೊಡುವುದು.

ಉದಾ : ವಿದ್ಯಾರ್ಥಿಗೆ ದೊರೆತಿರುವ ಮಿಂಚುಪಟ್ಟಿಗಳಲ್ಲಿರುವ ಸಂಖ್ಯೆಗಳು 9, 11, 6, 18

2. ಅವರಿಗೆ ನೀಡಿರುವ ಮಿಂಚುಪಟ್ಟಿಗಳಲ್ಲಿನ ಸಂಖ್ಯೆಗಳನ್ನು ಓದಲು ಸೂಚಿಸುವುದು.
3. ಆ ಸಂಖ್ಯೆಗಳಲ್ಲಿ ಅತ್ಯಂತ ಕಡಿಮೆ ಬೆಲೆಯ ಸಂಖ್ಯೆ ಅಂದರೆ ಕನಿಷ್ಠ ಸಂಖ್ಯೆಯನ್ನು ಹೇಳಲು ಸೂಚಿಸುವುದು. ಅದರಂತೆ ಅತ್ಯಂತ ಹೆಚ್ಚು ಬೆಲೆ ಸಂಖ್ಯೆ ಹೇಳಲು ಸೂಚಿಸುವುದು.
4. ಗರಿಷ್ಠ ಸಂಖ್ಯೆಗೆ ದೊಡ್ಡ ಬಳೆಯನ್ನು, ಕನಿಷ್ಠ ಸಂಖ್ಯೆಗೆ ಚಿಕ್ಕ ಬಳೆಯನ್ನು ಇಡಿಸುವ ಚಟುವಟಿಕೆ ಮಾಡಿಸುವುದು.

**ಸೂಚನೆ :**

ಮೇಲಿನಂತೆ 1 ರಿಂದ 50 ರವರೆಗಿನ ಸಂಖ್ಯೆಗಳನ್ನು ಬರೆದಿರುವ ಮಿಂಚು ಪಟ್ಟಿಗಳಲ್ಲಿ 4 ಮಿಂಚುಪಟ್ಟಿಗಳನ್ನು ಮಕ್ಕಳಿಗೆ ನೀಡಿ ಅವುಗಳಲ್ಲಿ ಕನಿಷ್ಠ - ಗರಿಷ್ಠ ಸಂಖ್ಯೆಗಳನ್ನು ಓದಿಸಿ ಬರೆಸುವುದು.

**ಶಿಕ್ಷಕರ ಗಮನಕ್ಕೆ :** ಶಿಕ್ಷಕರು ಈ ಹಂತಕ್ಕೆ ಬಂದ ವಿದ್ಯಾರ್ಥಿಗಳಿಗೆ ಹಲವು ಲೆಕ್ಕಗಳನ್ನು ನೋಟ್‌ಪುಸ್ತಕದಲ್ಲಿ ಮಾಡಿಸಿ ಕಲಿಕಾಂಶದ ಸಂಪೂರ್ಣ ಮನವರಿಕೆ ಮಾಡಿಸಿದ ನಂತರವೇ ಅಭ್ಯಾಸ ಚಟುವಟಿಕೆಯಲ್ಲಿ ತೊಡಗಿಸುವುದು.

2



# ಹೊರಾಂಗಣ (ಏರಿಕೆ - ಇಳಿಕೆ) (1 ರಿಂದ 50ರ ವರೆಗೆ)

44

**ಉದ್ದೇಶ** : ಏರಿಕೆ ಮತ್ತು ಇಳಿಕೆ ಕ್ರಮ ಪರಿಚಯಿಸುವುದು.

**ಕಲಿಸುವ ಕ್ರಮ :**

1. ತರಗತಿಯಲ್ಲಿರುವ ಮಕ್ಕಳಲ್ಲಿ ಎತ್ತರವಾಗಿರುವ ಮಗುವನ್ನು ನಿಲ್ಲಿಸಿ ಅವನ ಎಡಬದಿಗೆ ಅವನಿಗಿಂತ ಎತ್ತರದಲ್ಲಿ ಕಡಿಮೆ ಇರುವ ಮಕ್ಕಳನ್ನು ಅನುಕ್ರಮವಾಗಿ ನಿಲ್ಲಿಸುತ್ತ ಇಳಿಕೆ ಕ್ರಮ ಪರಿಚಯಿಸುವುದು.
2. ಇದರ ವಿರುದ್ಧ ಕ್ರಿಯೆಯ ಚಟುವಟಿಕೆಯ ಮೂಲಕ ಏರಿಕೆ ಕ್ರಮವನ್ನು ಪರಿಚಯಿಸುವುದು.

**ಸೂಚನೆ :**

ಇದೇ ರೀತಿ ಚಟುವಟಿಕೆಯನ್ನು ಹಲವು ಬಾರಿ ಮಾಡಿಸುತ್ತಾ, ಏರಿಕೆ ಎಂದರೆ ಹೆಚ್ಚುತ್ತಾ ಹೋಗುವುದು. ಇಳಿಕೆ ಎಂದರೆ ಕಡಿಮೆಯಾಗುತ್ತಾ ಹೋಗುವುದು ಎಂದು ಮನವರಿಕೆ ಮಾಡುವುದು.




# ಆಟ
## (ಏರಿಕೆ - ಇಳಿಕೆ)

45

**ಉದ್ದೇಶ** : 1 ರಿಂದ 50ರ ವರೆಗಿನ ಅಂಕಿ ಸಂಖ್ಯೆಯನ್ನು ಏರಿಕೆ ಮತ್ತು ಇಳಿಕೆ ಕ್ರಮದಲ್ಲಿ ಬರೆಯಲು ಕಲಿಸುವುದು.

**ಸಾಮಗ್ರಿ** : 1 ರಿಂದ 50ರ ವರೆಗಿನ ಸಂಖ್ಯೆಗಳ ಮಿಂಚುಪಟ್ಟಿಗಳು.

**ಕಲಿಸುವ ಕ್ರಮ :**

1. ಡಬ್ಬದಲ್ಲಿರುವ ಮಿಂಚು ಪಟ್ಟಿಗಳಲ್ಲಿ ತಲಾ 4 ಮಿಂಚುಪಟ್ಟಿಗಳನ್ನು ತೆಗೆದುಕೊಳ್ಳಲು ಮಕ್ಕಳಿಗೆ ಹೇಳುವುದು.
2. ನಾಲ್ಕು ಮಿಂಚು ಪಟ್ಟಿಗಳಲ್ಲಿ ಕನಿಷ್ಠ ಬೆಲೆಯ ಮಿಂಚುಪಟ್ಟಿ ಗುರ್ತಿಸಿ ಅದರ ಮುಂದೆ ಹೆಚ್ಚು ಬೆಲೆಯ ಮಿಂಚುಪಟ್ಟಿಯನ್ನು ಏರಿಕೆ ಕ್ರಮದಲ್ಲಿ ಜೋಡಿಸುತ್ತಾ ಹೇಳಿಸುವ ಮತ್ತು ಬರೆಯುವ ಚಟುವಟಿಕೆ ಮಾಡಿಸುವುದು. ಇದೆ ರೀತಿ ಹಲವು ಚಟುವಟಿಕೆ ಮಾಡಿಸುತ್ತ ಏರಿಕೆ ಎಂದರೆ ಹೆಚ್ಚಾಗುತ್ತಾ ಹೋಗುತ್ತದೆ ಎಂಬ ಅರಿವನ್ನು ಮೂಡಿಸುವುದು.
3. ಇದೇ ರೀತಿಯ ಚಟುವಟಿಕೆಯನ್ನು ವಿರುದ್ಧ ಕ್ರಿಯೆಯಲ್ಲಿ ಮಾಡಿಸುತ್ತ ಇಳಿಕೆ ಕ್ರಮ ಪರಿಚಯ ಮಾಡಿಸುವುದು.

**ಶಿಕ್ಷಕರ ಗಮನಕ್ಕೆ :** ಶಿಕ್ಷಕರು ಈ ಹಂತಕ್ಕೆ ಬಂದ ವಿದ್ಯಾರ್ಥಿಗಳಿಗೆ ನೋಟ್‌ಪುಸ್ತಕ / ಕರಿಹಲಗೆಯಲ್ಲಿ ಕೆಲವು ಲೆಕ್ಕಗಳನ್ನು ನೀಡಿ ಕಲಿಕಾಂಶದ ಸಂಪೂರ್ಣ ಮನವರಿಕೆ ಮಾಡಿಸಿದ ನಂತರವೇ ಅಭ್ಯಾಸ ಹಂತಕ್ಕೆ ಕಳುಹಿಸುವುದು.



# ಏರಿಕೆ - ಇಳಿಕೆ

## 48

**ಉದ್ದೇಶ** : ಸಂಖ್ಯೆಗಳ ಮಿಂಚು ಪಟ್ಟಿಯನ್ನು ಏರಿಕೆ ಮತ್ತು ಇಳಿಕೆ ಕ್ರಮದಲ್ಲಿ ಜೋಡಿಸುವುದು.

**ಸಾಮಗ್ರಿ** : 1-50ರ ವರೆಗಿನ 2 ಸೆಟ್ ಮಿಂಚುಪಟ್ಟಿಗಳು

**ಆಡಿಸುವ ಕ್ರಮ:**

1. ಈ ಆಟವನ್ನು ಇಬ್ಬರು ಆಡಬಹುದು.
2. ವಿದ್ಯಾರ್ಥಿಗಳು ತಲಾ 5 ಮಿಂಚು ಪಟ್ಟಿಗಳನ್ನು ತೆಗೆದುಕೊಂಡು ಒಬ್ಬರು ಮೊದಲು ಏರಿಕೆ ಕ್ರಮದಲ್ಲಿ ತೆಗೆದುಕೊಂಡು ಹಾಗೂ ಒಬ್ಬರು ಇಳಿಕೆ ಕ್ರಮದಲ್ಲಿ ಜೋಡಿಸಲು ಸೂಚನೆ ನೀಡಿ ಪುಸ್ತಕದಲ್ಲಿ ನಮೂದಿಸುವಂತೆ ತಿಳಿಸುವುದು.
3. ಯಾರು ಮೊದಲ ಚಟುವಟಿಕೆಯನ್ನು ಪೂರ್ಣಗೊಳಿಸುವರೋ ಅವರು ಪ್ರಥಮ, ನಂತರದವರು ದ್ವಿತೀಯ ಎಂದು ಹೇಳಿ ಉತ್ತೇಜನ ನೀಡುವುದು.

**ಸೂಚನೆ :** ವಿದ್ಯಾರ್ಥಿಗಳಿಗೆ ಆಟದ ಬೋರ್ಡ್‌ನ್ನು ನೀಡಿ ಆಟವಾಡಲು ಮಾರ್ಗದರ್ಶನ ಮಾಡುವುದು.

ವಿದ್ಯಾರ್ಥಿಗಳು ಈ ಆಟವನ್ನು ಆಡುತ್ತಾ ನೋಟ್ ಪುಸ್ತಕದಲ್ಲಿ ಬರೆಯಬೇಕು.

ಉದಾ :



2

# ಕ್ರಮವಾಚಕಗಳು

49

**ಉದ್ದೇಶ** : 1 ರಿಂದ 10ರವರೆಗಿನ ಅಂಕೆಗಳನ್ನು ಬಳಸಿ 1ನೇಯದ್ದು 2ನೇಯದ್ದು, 3ನೇಯದ್ದು ಇದೇ ರೀತಿ 10ರ ವರೆಗೆ ಕಲ್ಪಿಸುವುದು.

**ಸಾಮಗ್ರಿ** : ಮಿಂಚುಪಟ್ಟಿಗಳು, ಬೀಜಗಳು, ಮಣಿಕಟ್ಟು

**ಕಲಿಸುವ ಕ್ರಮ :**

1. ಮಕ್ಕಳನ್ನು ಸಾಲಾಗಿ ನಿಲ್ಲಿಸಿ ಹೆಸರನ್ನು ಹೇಳಿಸುವುದರ ಮೂಲಕ 1ನೇ ಮಗು, 2ನೇ ಮಗು, 3ನೇ ಮಗು ಈ ರೀತಿ 10ನೇ ಮಗುವಿನ ವರೆಗೂ ವಿವರಿಸುವುದು. ನಂತರ ಪ್ರಶ್ನೆಗಳನ್ನು ಕೇಳುವುದರ ಮೂಲಕ 5ನೇ ಮಗುವಿನ ಹೆಸರೇನು? 3ನೇ ಮಗುವಿನ ಹೆಸರೇನು? 8ನೇ ಮಗುವಿನ ಹೆಸರೇನು? ಈ ರೀತಿ ಪ್ರಶ್ನೆಗಳನ್ನು ಕೇಳಿ ಉತ್ತರ ಪಡೆಯುವುದು.

2. ಮಣಿಕಟ್ಟನ್ನು ಬಳಿ 1ನೇ ಸಾಲಿನಲ್ಲಿ ಎಷ್ಟು ಮಣಿಗಳಿವೆ – 2ನೇ ಸಾಲಿನಲ್ಲಿ ಎಷ್ಟು ಮಣಿಗಳಿವೆ, 3ನೇ ಸಾಲಿನಲ್ಲಿ ಎಷ್ಟು ಮಣಿಗಳಿವೆ ಎಂದು ಪ್ರಶ್ನೆಗಳನ್ನು ಕೇಳಿ ಉತ್ತರ ಪಡೆಯುವುದು. ನಂತರ ಮಣಿಗಳ ಅಂಕಿ-ಸಂಖ್ಯೆಗಳನ್ನು ಹೇಳುತ್ತಾ ಎಷ್ಟನೇ ಸಾಲಿನಲ್ಲಿ ಇದೆ ಎಂದು ಕೇಳಿ ಉತ್ತರ ಪಡೆಯುವುದು.

3. ಬೀಜಗಳ 10 ಗುಂಪುಗಳನ್ನು ಮಾಡಿ ಮೊದಲ ಗುಂಪಿಗೆ 1ನೇ ಎಂದು, ನಂತರದ ಗುಂಪಿಗೆ 2ನೇ ಎಂದು, ನಂತರದ ಗುಂಪಿಗೆ 3ನೇ ಎಂದು, ಈ ರೀತಿ 10ನೇ ಗುಂಪಿನ ವರೆಗೆ ಪರಿಚಯಿಸುವುದು.

4. ಪ್ರತಿ ಮಗುವಿನ ಕೈಗೆ 1ನೇ, 2ನೇ, 3ನೇ, 4ನೇ ಈ ರೀತಿ 10ರವರೆಗೆ ಬರೆದಿರುವ 10 ಮಿಂಚು ಪಟ್ಟಿಗಳನ್ನು ಕೊಟ್ಟು ಕ್ರಮವಾಗಿ ಮಿಂಚು ಪಟ್ಟಿಗಳನ್ನು ಜೋಡಿಸುವಂತೆ ತಿಳಿಸುವುದು.

**ಶಿಕ್ಷಕರ ಗಮನಕ್ಕೆ :** ಶಿಕ್ಷಕರು ಈ ಹಂತಕ್ಕೆ ಬಂದ ವಿದ್ಯಾರ್ಥಿಗಳಿಗೆ ಮೇಲಿನ ಚಟುವಟಿಕೆಗಳನ್ನು ಮಾಡಿಸಿದ ನಂತರ ನೋಟ್‌ಪುಸ್ತಕದಲ್ಲಿ ಬರೆಸಿ ಕಲಿಕಾಂಶದ ಸಂಪೂರ್ಣ ಮನವರಿಕೆ ಮಾಡಿಸಿದ ನಂತರವೇ ಮುಂದಿನ ಹಂತಕ್ಕೆ ಕಳುಹಿಸುವುದು.

2



# ಹೊರಾಂಗಣ
## (ಸರಿ ಸಂಖ್ಯೆ ಮತ್ತು ಬೆಸಸಂಖ್ಯೆ)

53

**ಉದ್ದೇಶ** : ಸರಿ ಮತ್ತು ಬೆಸ ಸಂಖ್ಯೆಗಳ ಕಲ್ಪನೆ ಮೂಡಿಸುವುದು.

**ಕಲಿಸುವ ಕ್ರಮ :**

1. ಉದಾ : 10 ಮಕ್ಕಳನ್ನು ವೃತ್ತಾಕಾರದಲ್ಲಿ ನಿಲ್ಲಿಸಿ, ಓಡಿಸುತ್ತಾ ಎಷ್ಟಪ್ಪ ಎಷ್ಟು? ಎಂದು ಶಿಕ್ಷಕರು ಹೇಳಿದಾಗ, ಮಕ್ಕಳು ನೀವು ಹೇಳಿದಷ್ಟು ಎಂದು ಹೇಳುತ್ತಾರೆ. ನಂತರ ಶಿಕ್ಷಕರು 2 ಎಂದಾಗ ಮಕ್ಕಳೆಲ್ಲರೂ ಎರಡೆರಡು ಮಕ್ಕಳ ಗುಂಪು ಮಾಡುತ್ತಾರೆ. ಗುಂಪು ಮಾಡಿದಾಗ, ಎಲ್ಲಾ ಮಕ್ಕಳಿಗೂ ಗುಂಪು ಸಿಕ್ಕರೆ, 10 ಎನ್ನುವುದು ಸರಿ ಸಂಖ್ಯೆ ಎಂದು ತಿಳಿಸುವುದು. ಉದಾ : 11 ಮಕ್ಕಳಿದ್ದರೆ, ಇದೇ ರೀತಿ ಗುಂಪು ಮಾಡಿಸಿದಾಗ 1 ಮಗುವಿನ ಗುಂಪು ಸಿಗುವುದಿಲ್ಲ.

2. ಉದಾ : 16 ಮಕ್ಕಳಿದ್ದರೆ, 4 ಎಂದಾಗ, 4ರ ಗುಂಪು ಮಾಡುತ್ತಾರೆ. ಎಲ್ಲಾ ಮಕ್ಕಳಿಗೂ ಗುಂಪು ಸಿಗುತ್ತದೆ.

3. ಉದಾ : 15 ಮಕ್ಕಳಿದ್ದಾರೆ, 6 ಎಂದು ಹೇಳಿದಾಗ, 6ರ ಗುಂಪು ಮಾಡುತ್ತಾರೆ. ಆ ಮಕ್ಕಳಿಗೆ ಗುಂಪು ಸಿಗುವುದಿಲ್ಲ. ಆಗ 15 ಬೆಸಸಂಖ್ಯೆ ಎನ್ನುವ ಕಲ್ಪನೆ ಮೂಡಿಸುವುದು.

4. ಇದೇ ರೀತಿ ಶಿಕ್ಷಕರು ಬೇರೆ ಬೇರೆ ಸಂಖ್ಯೆಗಳನ್ನು ಉಳಿಸಿ, ಗುಂಪು ಮಾಡುವುದರ ಮೂಲಕ ಸರಿ ಮತ್ತು ಬೆಸ ಸಂಖ್ಯೆ ಕಲ್ಪನೆ ಮೂಡಿಸುವುದು.

**ಸೂಚನೆ :** ಶಿಕ್ಷಕರು ಗುಂಪು ಮಾಡಲು ಸಂಖ್ಯೆ ಹೇಳುವಾಗ ಸರಿಸಂಖ್ಯೆಯ ಗುಂಪನ್ನೇ ಹೇಳುವುದು.

2 

# ಸರಿ ಸಂಖ್ಯೆ ಮತ್ತು ಬೆಸಸಂಖ್ಯೆ

54

**ಉದ್ದೇಶ** : ಸರಿ ಮತ್ತು ಬೆಸ ಸಂಖ್ಯೆಗಳ ಕಲ್ಪನೆ ಮೂಡಿಸುವುದು.

**ಸಾಮಗ್ರಿ** : ಬೀಜಗಳು, ಮಣಿಗಳು

**ಕಲಿಸುವ ಕ್ರಮ :**

1. ಶಾಲೆಯಲ್ಲಿ ಸ್ಥಳೀಯವಾಗಿ ಸಿಗುವ ಬೀಜ, ಕಲ್ಲು, ಮಣಿಗಳನ್ನು ತೆಗೆದುಕೊಂಡು ಶಿಕ್ಷಕರು, ಮಕ್ಕಳಿಗೆ ಒಂದೊಂದು ಹಿಡಿ ಬೀಜಗಳನ್ನು ಕೊಟ್ಟು ಎಣಿಸುವಂತೆ ಹೇಳುವುದು. ನಂತರ ಬೀಜಗಳನ್ನು ಎರಡರ ಗುಂಪು ಮಾಡುವಂತೆ ತಿಳಿಸುವುದು. ಒಂದು ಬೀಜ ಉಳಿದಿದ್ದರೆ, ಬೆಸ ಸಂಖ್ಯೆ ಎಂದು, ಬೀಜ ಉಳಿಯದಿದ್ದರೆ, ಸರಿಸಂಖ್ಯೆ ಎಂದು ತಿಳಿಸುವುದು.

   ಉದಾ : 15 ಬೆಸಸಂಖ್ಯೆ, 16 ಸಮಸಂಖ್ಯೆ, 17 ಬೆಸಸಂಖ್ಯೆ, 18 ಸಮಸಂಖ್ಯೆ, 19 ಬೆಸಸಂಖ್ಯೆ

2. ಕಡ್ಡಿಗಳನ್ನು 10ರ ಕಟ್ಟುಗಳಾಗಿ ಮಾಡಿ, 1 ಹತ್ತರ ಕಟ್ಟು ಪೂರ್ಣ ಇದ್ದರೆ, ಸರಿ ಸಂಖ್ಯೆ ಎಂದು, 1 ಬಿಡಿಕಡ್ಡಿ ಸೇರಿಸಿದರೆ ಬೆಸಸಂಖ್ಯೆ ಎಂದು 2 ಬಿಡಿ ಕಡ್ಡಿ ಸೇರಿಸಿದರೆ, ಸರಿಸಂಖ್ಯೆ ಎಂದು, 03 ಬಿಡಿಕಡ್ಡಿ ಸೇರಿಸಿದರೆ, ಬೆಸಸಂಖ್ಯೆ ಎಂದು ಇದೇ ರೀತಿ ಚಟುವಟಿಕೆ ಮಾಡಿಸುತ್ತಾ

   1, 3, 5, 7, 9, 11, 13... ಇವು ಬೆಸಸಂಖ್ಯೆ ಎಂದು 2, 4, 6, 8, 10, 12, 14... ಇವು ಸರಿಸಂಖ್ಯೆ ಎಂದು ಅರ್ಥ ಮಾಡಿಸುವುದು.

**ಶಿಕ್ಷಕರ ಗಮನಕ್ಕೆ :** ಈ ಹಂತಕ್ಕೆ ಬಂದ ವಿದ್ಯಾರ್ಥಿಗಳಿಗೆ ನೋಟ್‌ಪುಸ್ತಕದಲ್ಲಿ ಸರಿಸಂಖ್ಯೆ – ಬೆಸಸಂಖ್ಯೆಗಳನ್ನು ಬರೆಸಿ ಕಲಿಕಾಂಶದ ಸಂಪೂರ್ಣ ಮನವರಿಕೆ ಮಾಡಿಸಿದ ನಂತರವೇ ಮುಂದಿನ ಹಂತಕ್ಕೆ ಕಳುಹಿಸುವುದು.

2 

# ಮೌಲ್ಯಮಾಪನ
## (ಹಿಂದೆ - ಮುಂದೆ - ಮಧ್ಯೆ)

61

**ಸೂಚನೆ :** ಈ ಕೆಳಗಿನ ಲೆಕ್ಕಗಳನ್ನು ನೋಟ್‌ಪುಸ್ತಕದಲ್ಲಿ ಬರೆದುಕೊಂಡು ಹಿಂದೆ-ಮುಂದೆ ಮಧ್ಯದ ಸಂಖ್ಯೆಯನ್ನು ಬರೆ.

| | | | | | | | | |
|---|---|---|---|---|---|---|---|---|
| | 5 | 6 | | 23 | 24 | | 15 | 16 |
| | 45 | 46 | | 38 | 39 | | 21 | 22 |
| | 41 | 42 | | 33 | 34 | | 18 | 19 |
| 19 | 20 | | 38 | 39 | | 25 | 26 | |
| 10 | 11 | | 22 | 23 | | 40 | 41 | |
| 48 | 49 | | 18 | 19 | | 28 | 29 | |
| 21 | | 23 | 42 | | 44 | 47 | | 49 |
| 4 | | 6 | 32 | | 34 | 45 | | 47 |
| 35 | | 37 | 28 | | 30 | 15 | | 17 |
| | | 5 | 14 | | | | 43 | |
| 34 | 35 | | | | 9 | 29 | | 31 |
| | 23 | 24 | | 10 | | | 23 | 24 |
| 18 | | | | | 36 | | 19 | |

2 

# ಮೌಲ್ಯಮಾಪನ (ಹೆಚ್ಚು ಕಡಿಮೆ ಸಮ) (1 ರಿಂದ 50)

**62**

| **ಸೂಚನೆ :** ಈ ಕೆಳಗಿನ ಲೆಕ್ಕಗಳನ್ನು ನೋಟ್‌ಪುಸ್ತಕದಲ್ಲಿ ಬರೆದುಕೊಂಡು ಸೂಕ್ತ ಚಿಹ್ನೆಯನ್ನು ಬರೆಯಿರಿ. | | | **ಸೂಚನೆ :** ಈ ಕೆಳಗಿನ ಲೆಕ್ಕಗಳನ್ನು ನೋಟ್‌ಪುಸ್ತಕದಲ್ಲಿ ಬರೆದುಕೊಂಡು ಚಿಹ್ನೆಗೆ ಅನುಸಾರವಾಗಿ ಸೂಕ್ತವಾದ ಸಂಖ್ಯೆಯನ್ನು ಬರೆಯಿರಿ. | | |
|---|---|---|---|---|---|
| 9 | ☐ | 15 | ☐ | < | 5 |
| 16 | ☐ | 24 | 35 | > | ☐ |
| 50 | ☐ | 50 | 18 | > | ☐ |
| 48 | ☐ | 20 | ☐ | = | 40 |
| 25 | ☐ | 38 | 28 | < | ☐ |
| 20 | ☐ | 20 | 10 | = | ☐ |
| 12 | ☐ | 37 | 30 | > | ☐ |
| 32 | ☐ | 32 | ☐ | > | 15 |
| 47 | ☐ | 27 | 36 | < | ☐ |
| 32 | ☐ | 16 | ☐ | = | 25 |
| 19 | ☐ | 35 | ☐ | < | 18 |
| 39 | ☐ | 40 | 28 | > | ☐ |

2 

# ಮೌಲ್ಯಮಾಪನ (ಕನಿಷ್ಠ - ಗರಿಷ್ಠ)
## (1 ರಿಂದ 50)

**63**

<table>
<tr><td colspan="3">ಸೂಚನೆ : ಈ ಕೆಳಗಿನ ಲೆಕ್ಕಗಳನ್ನು ನೋಟ್‌ಪುಸ್ತಕದಲ್ಲಿ ಬರೆದುಕೊಂಡು ಕನಿಷ್ಠ ಬೆಲೆಯ ಸಂಖ್ಯೆಗೆ ವೃತ್ತ ಹಾಕು</td><td colspan="3">ಸೂಚನೆ : ಈ ಕೆಳಗಿನ ಲೆಕ್ಕಗಳನ್ನು ನೋಟ್‌ಪುಸ್ತಕದಲ್ಲಿ ಬರೆದುಕೊಂಡು ಗರಿಷ್ಠ ಬೆಲೆಯ ಸಂಖ್ಯೆಗೆ ವೃತ್ತ ಹಾಕು.</td></tr>
<tr><td>15</td><td>11</td><td>26</td><td>15</td><td>4</td><td>9</td></tr>
<tr><td>18</td><td>27</td><td>37</td><td>12</td><td>18</td><td>14</td></tr>
<tr><td>47</td><td>29</td><td>10</td><td>28</td><td>17</td><td>30</td></tr>
<tr><td>33</td><td>9</td><td>18</td><td>50</td><td>13</td><td>20</td></tr>
<tr><td>45</td><td>50</td><td>21</td><td>17</td><td>10</td><td>40</td></tr>
<tr><td>39</td><td>12</td><td>11</td><td>20</td><td>9</td><td>18</td></tr>
<tr><td>14</td><td>21</td><td>33</td><td>36</td><td>15</td><td>28</td></tr>
<tr><td>15</td><td>18</td><td>16</td><td>14</td><td>30</td><td>20</td></tr>
<tr><td>31</td><td>9</td><td>11</td><td>30</td><td>18</td><td>43</td></tr>
<tr><td>46</td><td>10</td><td>20</td><td>50</td><td>28</td><td>32</td></tr>
<tr><td>30</td><td>15</td><td>18</td><td>45</td><td>26</td><td>50</td></tr>
<tr><td>50</td><td>40</td><td>10</td><td>18</td><td>25</td><td>10</td></tr>
<tr><td>17</td><td>9</td><td>28</td><td>36</td><td>39</td><td>31</td></tr>
<tr><td>45</td><td>15</td><td>26</td><td>49</td><td>21</td><td>16</td></tr>
<tr><td>23</td><td>30</td><td>9</td><td>18</td><td>25</td><td>12</td></tr>
</table>

2



# ಮೌಲ್ಯಮಾಪನ (ಏರಿಕೆ - ಇಳಿಕೆ)
## (1 ರಿಂದ 50ರ ವರೆಗೆ)

64

| **ಸೂಚನೆ :** ಈ ಕೆಳಗಿನ ಸಂಖ್ಯೆಗಳನ್ನು ನೋಟ್ ಪುಸ್ತಕದಲ್ಲಿ ಬರೆದುಕೊಂಡು ಏರಿಕೆ ಕ್ರಮದಲ್ಲಿ ಬರೆಯಿರಿ. | | | | **ಸೂಚನೆ :** ಈ ಕೆಳಗಿನ ಲೆಕ್ಕಗಳನ್ನು ನೋಟ್‌ಪುಸ್ತಕದಲ್ಲಿ ಬರೆದುಕೊಂಡು ಇಳಿಕೆ ಕ್ರಮದಲ್ಲಿ ಬರೆಯಿರಿ. | | | |
|---|---|---|---|---|---|---|---|
| 17 | 9 | 28 | 10 | 50 | 20 | 9 | 18 |
| 45 | 15 | 26 | 50 | 17 | 10 | 12 | 40 |
| 12 | 30 | 18 | 43 | 50 | 13 | 20 | 30 |
| 23 | 11 | 9 | 15 | 28 | 17 | 30 | 40 |
| 17 | 14 | 30 | 20 | 15 | 9 | 12 | 18 |
| 36 | 15 | 28 | 40 | 15 | 4 | 9 | 30 |
| 26 | 16 | 38 | 29 | 32 | 10 | 18 | 36 |
| 10 | 25 | 42 | 35 | 40 | 20 | 30 | 50 |
| 36 | 12 | 48 | 26 | 26 | 38 | 16 | 25 |
| 49 | 41 | 46 | 45 | 40 | 29 | 48 | 32 |
| 18 | 42 | 29 | 33 | 23 | 18 | 43 | 28 |
| 33 | 28 | 16 | 42 | 42 | 18 | 28 | 33 |
| 16 | 32 | 25 | 38 | 19 | 26 | 10 | 9 |
| 8 | 10 | 40 | 30 | 32 | 37 | 50 | 22 |
| 20 | 40 | 50 | 30 | 5 | 25 | 45 | 35 |

2



# ಮೌಲ್ಯಮಾಪನ
## ಕ್ರಮವಾಚಕಗಳು

**65**

**ಸೂಚನೆ** : ಈ ಚಟುವಟಿಕೆಯನ್ನು ನೋಟ್‌ಪುಸ್ತಕದಲ್ಲಿ ಬರೆಯಿರಿ.

1 ರಿಂದ 10ರ ವರೆಗಿನ ತರಗತಿಗಳನ್ನು, ಕ್ರಮವಾಚಕಗಳಲ್ಲಿ ಬರೆ.

| 2  | # ಮೌಲ್ಯಮಾಪನ<br>## ಸರಿ ಸಂಖ್ಯೆ ಮತ್ತು ಬೆಸ ಸಂಖ್ಯೆ | 66 |
|---|---|---|

**ಸೂಚನೆ** : ಈ ಕೆಳಗಿನ ಚಟುವಟಿಕೆಗಳನ್ನು ನೋಟ್‌ಪುಸ್ತಕದಲ್ಲಿ ಮಾಡಿರಿ.

1 ರಿಂದ 50ರವರೆಗಿನ ಎಲ್ಲಾ ಸರಿ ಸಂಖ್ಯೆಗಳನ್ನು ಬರೆಯಿರಿ.

| | | | | | | | | | |
|---|---|---|---|---|---|---|---|---|---|
| | | | | | | | | | |
| | | | | | | | | | |
| | | | | | | | | | |

1 ರಿಂದ 50ರವರೆಗಿನ ಎಲ್ಲಾ ಬೆಸ ಸಂಖ್ಯೆಗಳನ್ನು ಬರೆಯಿರಿ.

| | | | | | | | | | |
|---|---|---|---|---|---|---|---|---|---|
| | | | | | | | | | |
| | | | | | | | | | |
| | | | | | | | | | |

3



# ಹಾಡು

67

**ಸೂಚನೆ :** ಮಕ್ಕಳನ್ನು ವೃತ್ತಾಕಾರವಾಗಿ ನಿಲ್ಲಿಸಿ, ಈ ಹಂತಕ್ಕೆ ಬಂದ ಮಗುವಿಗೆ ಹೆಚ್ಚು ಗಮನ ಹರಿಸುತ್ತಾ, ಶಿಕ್ಷಕರು ಸರಳ ಅಭಿನಯದ ಮೂಲಕ ಹಾಡನ್ನು ಹೇಳಿಕೊಟ್ಟು ಹೇಳಿಸುವುದು.

ಎರಡಂಕಿಗಳ ಸಂಖ್ಯೆಗಳೆರಡು
ಬಂದು ಹತ್ತಿರ ಸೇರಿದವು
ಕೂಡುವ ಆಟ ಆಡುವ ಬನ್ನಿ
ಎಂದು ಅವುಗಳು ಹೇಳಿದವು

ಬಿಡಿಗಳು ತಾವು ನಿಂತವು ಕೂಡಲೆ
ಬಿಡಿಗಳ ಸರತಿಯ ಸಾಲಲ್ಲಿ
ಹತ್ತುಗಳೂನೂ ನಿಂತವು ಹಾಗೆಯೆ
ಹತ್ತರ ಸರತಿಯ ಸಾಲಲ್ಲಿ

ಬಿಡಿಗಳು ತಾವು ಒಟ್ಟಿಗೆ ಬೆರೆತು
ಒಂದೇ ಗುಂಪು ಆದವು
ಹತ್ತುಗಳೆಲ್ಲ ಒಟ್ಟಿಗೆ ಕಲೆತು
ತಾವು ಒಂದೇ ಆದವು.

3

# ಸಂಕಲನ ದಶಕ ರಹಿತ
## (1 ರಿಂದ 50)

68

**ಉದ್ದೇಶ** : 1 ರಿಂದ 50ರ ವರೆಗಿನ ಸಂಖ್ಯೆಗನ್ನು ಬಳಸಿ (ಮೊತ್ತ 50ಕ್ಕೆ ಮೀರದಂತೆ) ದಶಕ ರಹಿತ ಸಂಕಲನ ಮಾಡುವುದು.

**ಸಾಮಗ್ರಿ** : ಹತ್ತರ ಕಟ್ಟುಗಳು, 1 ರಿಂದ 50 ರವರೆಗಿನ ಅಂಕಿ ಸಂಖ್ಯೆಗಳ ಮಿಂಚುಪಟ್ಟಿಗಳು

**ಕಲಿಸುವ ಕ್ರಮ :** **ಚಟುವಟಿಕೆ - 1**

**ಮಾದರಿ :**

$$\begin{array}{r} 24 \\ +\ 13 \\ \hline 37 \end{array}$$

ಮಾದರಿಯಂತೆ ಹತ್ತರ ಕಟ್ಟುಗಳು ಮತ್ತು ಬಿಡಿ ಕಡ್ಡಿಗಳನ್ನು ಬಳಸುತ್ತ, ಬಿಡಿಕಡ್ಡಿಗಳಿಗೆ ಬಿಡಿಕಡ್ಡಿಗಳನ್ನೂ, ಹತ್ತರ ಕಟ್ಟುಗಳಿಗೆ ಹತ್ತರ ಕಟ್ಟುಗಳನ್ನು ಸೇರಿಸಿ ಬಂದ ಮೊತ್ತವನ್ನು ಸ್ಥಾನಕ್ಕನುಗುಣವಾಗಿ ಅಂಕಿಗಳಲ್ಲಿ ಬರೆಸುವುದು. ಇದೇ ರೀತಿ ಹಲವು ಚಟುವಟಿಕೆ ಮಾಡಿಸುತ್ತ ಸಂಕಲನ ಕ್ರಿಯೆಯನ್ನು ಮನದಟ್ಟು ಮಾಡಿಕೊಡುವುದು.

**ಚಟುವಟಿಕೆ - 2**

1. ನೆಲದ ಮೇಲೆ ಒಂದು ರೇಖೆಯನ್ನು ಬರೆದು ಹತ್ತು ಸಮಭಾಗಗಳಾಗಿ ಮಾಡಿ 0 ಇಂದ 10ರವರೆಗೆ ಅಂಕಿಗಳನ್ನು ಬರೆಯುವುದು.
2. 3 + 4 = 7 ಸಮಸ್ಯೆ ನೀಡಿ ಮಾದರಿಯಂತೆ ಚಟುವಟಿಕೆ ಮಾಡಿಸಿ ಉತ್ತರ ತಿಳಿಸುವುದು.




**ಸೂಚನೆ :** ಮಕ್ಕಳು ಕಲಿತಿರುವ ಸಂಖ್ಯೆಗಳನ್ನು ಬಳಸಿ ಇದೇ ರೀತಿ ಹಲವು ಚಟುವಟಿಕೆ ಮಾಡುವುದರ ಮೂಲಕ ಸಂಖ್ಯಾರೇಖೆಯನ್ನು ಬಳಸಿ ಸಂಕಲನ ಮಾಡುವ ಅಭ್ಯಾಸ ಮಾಡಿಸುವುದು.

**ಶಿಕ್ಷಕರ ಗಮನಕ್ಕೆ :** ಶಿಕ್ಷಕರು ಈ ಹಂತಕ್ಕೆ ಬಂದ ವಿದ್ಯಾರ್ಥಿಗಳಿಗೆ ಹಲವು ಲೆಕ್ಕಗಳನ್ನು ನೋಟ್‌ಪುಸ್ತಕದಲ್ಲಿ ಮಾಡಿಸಿ ಕಲಿಕಾಂಶದ ಸಂಪೂರ್ಣ ಮನವರಿಕೆ ಮಾಡಿಸಿದ ನಂತರವೇ ಅಭ್ಯಾಸ ಚಟುವಟಿಕೆಯಲ್ಲಿ ತೊಡಗಿಸುವುದು.

3



# ಮೌಖಿಕ ಲೆಕ್ಕಗಳು (ಸಂಕಲನ ದಶಕ ರಹಿತ) (1-50 ಮೌಖಿಕ ಪ್ರಶ್ನೆಗಳು)

74

**ಸೂಚನೆ :**

- ಶಿಕ್ಷಕರು ಸೂಚಿಸಿದ ವಿದ್ಯಾರ್ಥಿಯು ಈ ಹಂತಕ್ಕೆ ಬಂದಿರುವ ವಿದ್ಯಾರ್ಥಿಗೆ ಕೆಳಕಾಣಿಸಿದ ಒಂದೊಂದೇ ಪ್ರಶ್ನೆ ಕೇಳಿ ಉತ್ತರ ಪಡೆಯುವುದು.
- ಉತ್ತರಗಳು ಸರಿ / ತಪ್ಪು ಇದ್ದಾಗ್ಯೂ ಶಿಕ್ಷಕರಿಗೆ ವಾರದಿ ಮಾಡುವುದು

ಅಥವಾ

- ಶಿಕ್ಷಕರು ಈ ಹಂತಕ್ಕೆ ಬಂದ ಮಗುವಿಗೆ ಕೆಳಗಿನ ಒಂದೊಂದೇ ಪ್ರಶ್ನೆಗಳನ್ನು ಕೇಳುತ್ತಾ ಉತ್ತರ ಪಡೆಯುವುದು.

1. ರಮಳ ಬಳಿ 25 ಚಾಕೊಲೇಟ್‌ಗಳಿದ್ದವು. ಅವಳ ತಂದೆ 10 ಚಾಕೊಲೇಟ್‌ಗಳನ್ನು ಕೊಟ್ಟರು, ಈಗ ಅವಳ ಬಳಿ ಇರುವ ಒಟ್ಟು ಚಾಕೊಲೇಟ್‌ಗಳೆಷ್ಟು ?
2. ರವಿಯ ಮನೆಯಲ್ಲಿ 20 ತೆಂಗಿನ ಕಾಯಿಗಳಿದ್ದವು. ಅವನ ತಂದೆ ಸಂತೆಯಿಂದ 25 ತೆಂಗಿನ ಕಾಯಿಗಳನ್ನು ತಂದರು. ಹಾಗಾದರೆ, ರವಿಯ ಮನೆಯಲ್ಲಿರುವ ತೆಂಗಿನ ಕಾಯಿಗಳೆಷ್ಟು ?
3. ಒಂದು ಬಸ್ಸಿನಲ್ಲಿ 30 ಜನ ಕುಳಿತಿದ್ದರು. ದಾರಿ ಮಧ್ಯದಲ್ಲಿ 15 ಜನರು ಬಸ್ಸು ಹತ್ತಿದರು. ಹಾಗಾದರೆ ಆ ಬಸ್ಸಿನಲ್ಲಿರುವ ಒಟ್ಟು ಜನರೆಷ್ಟು ?
4. ಶೋಭಾಳು ಮನೆಯ ಮುಂಭಾಗದಲ್ಲಿರುವ ಹೂವಿನ ಗಿಡಗಳಲ್ಲಿ, ಒಂದರಲ್ಲಿ 30 ಹೂವುಗಳು ಮತ್ತೊಂದರಲ್ಲಿ 20 ಹೂವುಗಳನ್ನು ಕಿತ್ತರೆ ಶೋಭಳು ಕಿತ್ತ ಹೂವುಗಳೆಷ್ಟು ?

**ಶಿಕ್ಷಕರ ಗಮನಕ್ಕೆ :** ಇದೇ ರೀತಿ ಶಿಕ್ಷಕರು ಹೆಚ್ಚು ಹೆಚ್ಚು ಪ್ರಶ್ನೆಗಳನ್ನು ಕೇಳಿ ಮಕ್ಕಳಿಂದ ಉತ್ತರ ಪಡೆಯುವುದು.

3



# ಸಂಕಲನ ದಶಕ ರಹಿತ
## (1-50 ಮೌಖಿಕ ಪ್ರಶ್ನೆಗಳು)

**75**

**ಸಾಮಗ್ರಿ :** 6 ಮುಖಗಳಿರುವ ಸಾಧಾರಣ ಅಳತೆಯ ಎರಡು ಡೈಸ್‌ಗಳನ್ನು ತೆಗೆದುಕೊಂಡು ಒಂದು ಡೈಸ್‌ನ 6 ಮುಖಗಳ ಮೇಲೆ 24, 10, 13, 14 ಮತ್ತು 13 ಎಂದು ಹಾಗೂ ಇನ್ನೊಂದು ಡೈಸ್‌ನ ಮೇಲೆ 24, 33, 12, 13, 14 ಮತ್ತು 10 ಎಂದು ಬರೆಯುವುದು.

**ಆಟ ಆಡುವ ಕ್ರಮ :**

1. ಇದು ಸಂಕಲನದ ಆಟ ಎಂದು ಸೂಚನೆ ನೀಡಿ ಮಕ್ಕಳಿಗೆ ಡೈಸ್‌ಗಳನ್ನು ಕೊಡುವುದು.
2. ಆಟಗಾರನು ಎರಡು ಡೈಸ್‌ಗಳನ್ನು ನೆಲದ ಮೇಲೆ ಬಿಡುವುದು. ಮೇಲ್ಮುಖವಾಗಿ ಬಿದ್ದ ಸಂಖ್ಯೆಗಳನ್ನು ತನ್ನ ಸ್ಲೇಟು ಅಥವಾ ನೋಟ್ ಪುಸ್ತಕದಲ್ಲಿ ಸಾಮಾನ್ಯ ರೂಪದಲ್ಲಿ ಬರೆದುಕೊಂಡು ಸಾಮಾನ್ಯ ಮೊತ್ತ ಕಂಡುಹಿಡಿಯಬೇಕು.
3. ಇದೇ ರೀತಿ ಸರದಿಯ ಪ್ರಕಾರ ಡೈಸ್‌ಗಳನ್ನು ಹಸ್ತಾಂತರಿಸಿ ಪ್ರತಿಯೊಬ್ಬ ಆಟಗಾರನು ಚಟುವಟಿಕೆಯಲ್ಲಿ ಭಾಗವಹಿಸುವಂತೆ ಗಮನ ಹರಿಸುವುದು.

**ಸೂಚನೆ :** ಈ ಆಟವನ್ನು ಗರಿಷ್ಠ 5 ವಿದ್ಯಾರ್ಥಿಗಳು ಆಡಬಹುದು.
ಆಟವಾಡುವಾಗ ಬಂದ ಸಮಸ್ಯೆಗಳನ್ನು ನೋಟ್‌ಪುಸ್ತಕದಲ್ಲಿ ಬರೆದುಕೊಂಡು ಬಿಡಿಸುವುದು.

3



# ವ್ಯವಕಲನ ದಶಕ ರಹಿತ
## (1 ರಿಂದ 50)

76

**ಉದ್ದೇಶ** : 1 ರಿಂದ 50ರವರೆಗಿನ ಸಂಖ್ಯೆಗಳನ್ನು ಬಳಸಿ (ವ್ಯತ್ಯಾಸ 50ಕ್ಕೆ ಮೀರದಂತೆ) ಸರಳ ರಹಿತ ವ್ಯವಕಲನ ಮಾಡುವುದು.

**ಸಾಮಗ್ರಿ** : ಹತ್ತರ ಕಡ್ಡಿ ಕಟ್ಟುಗಳು, ಬಿಡಿ ಕಡ್ಡಿಗಳು.

**ಮಾದರಿ :**

$$\begin{array}{r} 28 \\ -\ 14 \\ \hline 14 \end{array}$$

**ಚಟುವಟಿಕೆ 1 :**

ಮಾದರಿಯಂತೆ ದೊಡ್ಡ ಸಂಖ್ಯೆಗೆ ಅನುಗುಣವಾಗಿ ಹತ್ತರ ಕಟ್ಟುಗಳು ಹಾಗೂ ಬಿಡಿ ಕಡ್ಡಿಗಳನ್ನು ಬಳಸುತ್ತ ಬಿಡಿ ಸ್ಥಾನದಲ್ಲಿರುವ ಕಳೆಯಬೇಕಾದ ಅಂಕೆಯಷ್ಟೇ ಕಡ್ಡಿಗಳನ್ನು ಬಿಡಿ ಕಡ್ಡಿಗಳಿಂದ ಹೊರ ತೆಗೆಯುವುದು. ಉಳಿದ ಬಿಡಿ ಕಡ್ಡಿಯಷ್ಟೇ ಅಂಕಿಯನ್ನು ಉತ್ತರದಲ್ಲಿ ಬರೆಯುವುದು. ಅಂತೆಯೇ ಹತ್ತರ ಸ್ಥಾನದಲ್ಲಿರುವ ಕಳೆಯಬೇಕಾದ ಅಂಕೆಯಷ್ಟೇ ಹತ್ತರ ಕಟ್ಟನ್ನು ಹತ್ತರ ಕಟ್ಟುಗಳಿಂದ ಹೊರ ತೆಗೆಯುವುದು. ಉಳಿದ ಹತ್ತರ ಕಟ್ಟಿನಷ್ಟು ಅಂಕಿಯನ್ನು ಉತ್ತರದಲ್ಲಿ ಬರೆಯುವುದು.

**ಸೂಚನೆ :** ಇದೇ ರೀತಿ ಹಲವು ಚಟುವಟಿಕೆ ಮಾಡಿಸುತ್ತ ಹೆಚ್ಚು ಬೆಲೆಯ ಸಂಖ್ಯೆಯಿಂದ ಕಡಿಮೆ ಬೆಲೆಯ ಸಂಖ್ಯೆಯನ್ನು ಕಳೆಯಬಹುದು ಎಂಬ ಕಲ್ಪನೆ ಮೂಡಿಸುವುದು.

**ಚಟುವಟಿಕೆ : 2**

1. ನೆಲದ ಮೇಲೆ ಒಂದು ರೇಖೆಯನ್ನು ಬರೆದು ಹತ್ತು ಸಮಭಾಗಗಳಾಗಿ ಮಾಡಿ 0 ಇಂದ 10ರವರೆಗೆ ಅಂಕಿಗಳನ್ನು ಬರೆಯುವುದು.
2. 5−2= 3 ಸಮಸ್ಯೆ ನೀಡಿ ಮಾದರಿಯಂತೆ ಚಟುವಟಿಕೆ ಮಾಡಿಸಿ ಉತ್ತರ ತಿಳಿಸುವುದು.




**ಸೂಚನೆ :** ಕಲಿತಿರುವ ಸಂಖ್ಯೆಗಳನ್ನು ಬಳಸಿ, ಇದೇ ರೀತಿ ಹಲವು ಚಟುವಟಿಕೆ ಮಾಡಿಸುವುದರ ಮೂಲಕ ಸಂಖ್ಯಾರೇಖೆಯನ್ನು ಬಳಸಿ ವ್ಯವಕಲನ ಮಾಡುವ ಅಭ್ಯಾಸ ಮಾಡಿಸುವುದು.

**ಶಿಕ್ಷಕರ ಗಮನಕ್ಕೆ :** ಶಿಕ್ಷಕರು ಈ ಹಂತಕ್ಕೆ ಬಂದ ವಿದ್ಯಾರ್ಥಿಗಳಿಗೆ ಹಲವು ಲೆಕ್ಕಗಳನ್ನು ನೋಟ್‌ಪುಸ್ತಕದಲ್ಲಿ ಮಾಡಿಸಿ ಕಲಿಕಾಂಶದ ಸಂಪೂರ್ಣ ಮನವರಿಕೆ ಮಾಡಿಸಿದ ನಂತರವೇ ಅಭ್ಯಾಸ ಚಟುವಟಿಕೆಯಲ್ಲಿ ತೊಡಗಿಸುವುದು.

3



# ಮೌಖಿಕ ಲೆಕ್ಕಗಳು (ವ್ಯವಕಲನ ದಶಕ ರಹಿತ) (1 ರಿಂದ 50)

**79**

**ಸೂಚನೆ :**

- ✦ ಶಿಕ್ಷಕರು ಸೂಚಿಸಿದ ವಿದ್ಯಾರ್ಥಿಯು ಈ ಹಂತಕ್ಕೆ ಬಂದಿರುವ ವಿದ್ಯಾರ್ಥಿಗೆ ಕೆಳಕಾಣಿಸಿದ ಒಂದೊಂದೇ ಪ್ರಶ್ನೆ ಕೇಳಿ ಉತ್ತರ ಪಡೆಯುವುದು
- ✦ ಉತ್ತರಗಳು ಸರಿ / ತಪ್ಪು ಇದ್ದಾಗ್ಯೂ ಶಿಕ್ಷಕರಿಗೆ ವರದಿ ಮಾಡುವುದು

ಅಥವಾ

- ✦ ಶಿಕ್ಷಕರು ಈ ಹಂತಕ್ಕೆ ಬಂದ ಮಗುವಿಗೆ ಕೆಳಗಿನ ಒಂದೊಂದೇ ಪ್ರಶ್ನೆಗಳನ್ನು ಕೇಳುತ್ತಾ ಉತ್ತರ ಪಡೆಯುವುದು.

**ಮೌಖಿಕ ಪ್ರಶ್ನೆಗಳು :**

1. ಸುಮಳ ಬಳಿ 25 ಬಿಸ್ಕೆಟ್‌ಗಳಿದ್ದವು, ಅವುಗಳಲ್ಲಿ 15 ಬಿಸ್ಕೆಟ್‌ಗಳನ್ನು ಗೀತಾಳಿಗೆ ಕೊಟ್ಟರೆ ಸುಮಳ ಬಳಿ ಉಳಿದ ಬಿಸ್ಕೆಟ್‌ಗಳೆಷ್ಟು ?
2. ರವಿಯ ಬಳಿ 40 ಗೋಲಿಗಳಿದ್ದವು, ಅವುಗಳಲ್ಲಿ 30 ಗೋಲಿಗಳನ್ನು ತನ್ನ ತಮ್ಮ ರಾಮನಿಗೆ ಕೊಟ್ಟರೆ ರವಿಯ ಬಳಿ ಉಳಿದ ಗೋಲಿಗಳೆಷ್ಟು?
3. ಗೀತಾಳು 30 ಮಾವಿನ ಹಣ್ಣುಗಳನ್ನು 10 ಮಾವಿನ ಹಣ್ಣುಗಳನ್ನು ತನ್ನ ಸ್ನೇಹಿತರೊಂದಿಗೆ ಹಂಚಿ ತಿಂದರೆ ಗೀತಾಳ ಬಳಿ ಉಳಿದ ಮಾವಿನ ಹಣ್ಣುಗಳೆಷ್ಟು ?
4. ರಾಜು 45 ಬಳಪಗಳನ್ನು ತಂದು 25 ಬಳಪಗಳನ್ನು ತನ್ನ ಸ್ನೇಹಿತರಿಗೆ ಕೊಟ್ಟರೆ ರಾಜುವಿನ ಬಳಿ ಉಳಿದ ಬಳಪಗಳೆಷ್ಟು ?

**ಸೂಚನೆ :** ಇದೇ ರೀತಿ ಹಲವಾರು ಪ್ರಶ್ನೆಗಳನ್ನು ಕೇಳಿ ಮಕ್ಕಳಿಂದ ಉತ್ತರ ಪಡೆಯುವುದು.

3



# ಆಟ (ವ್ಯವಕಲನ ದಶಕ ರಹಿತ) (1 ರಿಂದ 50)

**80**

**ಸಾಮಗ್ರಿ :** + ಆಟದಲ್ಲಿ ಬಳಸಿರುವ ಡೈಸ್‌ಗಳನ್ನು ಬಳಸುವುದು.

**ಆಟ ಆಡುವ ಕ್ರಮ :**

ಇದು ವ್ಯವಕಲನದ ಆಟ. ಈ ಆಟದಲ್ಲಿ ಮೇಲ್ಮುಖವಾಗಿ ಬಿದ್ದ ಸಂಖ್ಯೆಗಳಲ್ಲಿ ಹೆಚ್ಚು ಬೆಲೆಯ ಸಂಖ್ಯೆಗಳಲ್ಲಿ ಕಡಿಮೆ ಬೆಲೆಯ ಸಂಖ್ಯೆಗಳನ್ನು ಕಳೆಯಬೇಕು ಎಂದು ಸೂಚನೆ ನೀಡಿ ಡೈಸ್‌ಗಳನ್ನು ಕೊಡುವುದು. ಆಟಗಾರ 2 ಡೈಸ್‌ಗಳನ್ನು ನೆಲದ ಮೇಲೆ ಬಿಟ್ಟು ಮೇಲ್ಮುಖವಾಗಿ ಬಿದ್ದ ಸಂಖ್ಯೆಯಲ್ಲಿ ಹೆಚ್ಚು ಬೆಲೆಯ ಸಂಖ್ಯೆಯನ್ನು ಕಳೆಯಲು ಅನುಕೂಲವಾಗುವಂತೆ ಸಮಸ್ಯೆಯನ್ನು ಬರೆದುಕೊಂಡು ಉತ್ತರ ಕಂಡುಹಿಡಿಯುವುದು.

ಇದೇ ರೀತಿ ಸರದಿಯ ಪ್ರಕಾರ ಡೈಸ್‌ಗಳನ್ನು ಹಸ್ತಾಂತರಿಸಿ ಪ್ರತಿಯೊಬ್ಬ ಆಟಗಾರನು ಚಟುವಟಿಕೆಯಲ್ಲಿ ಭಾಗವಹಿಸುವಂತೆ ಗಮನ ಹರಿಸುವುದು.

**ಸೂಚನೆ :** 1. ಈ ಆಟವನ್ನು ಕನಿಷ್ಠ ಇಬ್ಬರು ಗರಿಷ್ಠ 5 ವಿದ್ಯಾರ್ಥಿಗಳು ಆಡಬಹುದು.

2. ಈ ಆಟವಾಡುವಾಗ ಬಂದ ಸಮಸ್ಯೆಗಳನ್ನೂ ನೋಟ್‌ಪುಸ್ತಕದಲ್ಲಿ ಬರೆದುಕೊಂಡು ಬಿಡಿಸುವುದು.

| 3 + - X ÷ | # ಮಿಶ್ರ ಲೆಕ್ಕಗಳು ದಶಕ ರಹಿತ (1 ರಿಂದ 50) | 81 |
|---|---|---|

**ಉದ್ದೇಶ** : ಸಂಕಲನ ಮತ್ತು ವ್ಯವಕಲನಗಳನ್ನೊಳಗೊಂಡ ಮಿಶ್ರಕ್ರಿಯೆಯನ್ನು ಅಭ್ಯಾಸ ಮಾಡುವುದು.

**ಸಾಮಗ್ರಿ** : ಸಂಖ್ಯೆಗಳ ಮಿಂಚುಪಟ್ಟಿಗಳು, +, – ಚಿಹ್ನೆಗಳು, ಹತ್ತರ ಕಟ್ಟುಗಳು ಮತ್ತು ಬಿಡಿಕಡ್ಡಿಗಳು.

**ಕಲಿಸುವ ಕ್ರಮ :**

14 + 12 – 5 ಈ ಸಮಸ್ಯೆಯನ್ನು ಬರೆಸುವುದು. ಕೆಳಕಂಡಂತೆ ಪ್ರಶ್ನಿಸುತ್ತಾ ಈ ಸಮಸ್ಯೆಯನ್ನು ಅರ್ಥೈಸುವುದು.

- ಈ ಸಮಸ್ಯೆಯನ್ನು ವಿದ್ಯಾರ್ಥಿಗಳಿಂದ ಹೇಳಿಸುವುದು.
- ಇಲ್ಲಿ ಬಳಕೆಯಾಗುವ ಚಿಹ್ನೆಗಳು ಯಾವುದು ಎಂದು ಪ್ರಶ್ನಿಸಿ ಉತ್ತರ ಪಡೆಯುವುದು.
- + ಮತ್ತು – ಚಿಹ್ನೆಯನ್ನು ಆಧರಿಸಿ ಮಾಡಬೇಕಾದ ಕ್ರಿಯೆಯನ್ನು ಹೇಳಿಸುವುದು.
- 2 ಕ್ರಿಯೆಗಳಲ್ಲಿ ಮೊದಲು ಯಾವ ಕ್ರಿಯೆ ಮಾಡಬೇಕು, ನಂತರ ಯಾವ ಕ್ರಿಯೆ ಮಾಡಬೇಕು ಎಂಬುದನ್ನು ಮಗುವಿನಿಂದ ಹೇಳಿಸುವುದು.

**ಕೆಳಕಂಡ ಹಂತಗಳಿಂದ ಕ್ರಿಯೆ ಮಾಡಿಸುವುದು**

- ಸಂಕಲನ ಮಾಡಬೇಕಾದರೆ ಯಾವ ಯಾವ ಸಂಖ್ಯೆಗಳನ್ನು ಒಟ್ಟು ಮಾಡಬೇಕೆಂದು ಪ್ರಶ್ನಿಸಿ ಕ್ರಿಯೆ ಮಾಡಿಸುವುದು.

  14 + 12 = 26

- ನಂತರ ಯಾವ ಕ್ರಿಯೆ ಮಾಡಬೇಕು ಎಂದು ಪ್ರಶ್ನಿಸಿ ಮುಂದಿನ ಹಂತದಲ್ಲಿ ಮನವರಿಕೆ ಮಾಡುವುದು. (ಸಂಕಲನ ಮಾಡಿದಾಗ ಬಂದ ಉತ್ತರದಿಂದ ಕೊಟ್ಟಿರುವ ಸಂಖ್ಯೆಯನ್ನು ಕಳೆಯಬೇಕು)

  26 – 5 = 21

ಕ್ರಿಯೆ ಮಾಡಿದ ನಂತರ ಬಂದ ಉತ್ತರವನ್ನು ಸಮಸ್ಯೆ ಮುಂದೆ ನೀಡಿ ಖಾಲಿ ಚೌಕದಲ್ಲಿ ಬರೆಸುವುದು.

**ಶಿಕ್ಷಕರ ಗಮನಕ್ಕೆ :** 1) ಮಗು ಚಟುವಟಿಕೆ ಮಾಡಲು ಅಗತ್ಯವಿದ್ದಲ್ಲಿ ಕಡ್ಡಿ / ಕಲ್ಲು / ಮನೆ ಬಳಸಿ ಲೆಕ್ಕ ಮಾಡಿಸುವುದು.

2) ಬೇರೆ – ಬೇರೆ ಸಮಸ್ಯೆಗಳನ್ನು ನೀಡಿ ಮಗು ಸ್ವತಂತ್ರವಾಗಿ ಸಮಸ್ಯೆ ಬಿಡಿಸಲು ಅಣಿಗೊಳಿಸುವುದು.

3 

# ಮೌಲ್ಯಮಾಪನ
## (ಸಂಕಲನ ದಶಕ ರಹಿತ)

**85**

**ಸೂಚನೆ :** ಈ ಕೆಳಗಿನ ಲೆಕ್ಕಗಳನ್ನು ನೋಟ್‌ಪುಸ್ತಕದಲ್ಲಿ ಬರೆದುಕೊಂಡು ಮಾಡಿರಿ.

| | | |
|---|---|---|
| 18 + 21 = ____ | 23 + 14 = ____ | 15 + 14 = ☐ <br> 23 + 13 = ☐ |
| 15 + 23 = ____ | 22 + 26 = ____ | 40 + 10 = ☐ <br> 22 + 13 = ☐ |
| 24 + 14 = ____ | 18 + 11 = ____ | 18 + 11 = ☐ <br> 15 + 12 = ☐ |
| 36 + 10 = ____ | 22 + 13 = ____ | 24 + 13 = ☐ <br> 12 + 15 = ☐ |
| 15 + 23 = ____ | 16 + 23 = ____ | 18 + 10 = ☐ <br> 33 + 13 = ☐ |
| 10 + 23 = ____ | 20 + 22 = ____ | 16 + 12 = ☐ <br> 32 + 13 = ☐ |

3 

# ಮೌಲ್ಯಮಾಪನ
## (ವ್ಯವಕಲನ ದಶಕ ರಹಿತ 1 ರಿಂದ 50)

**86**

**ಸೂಚನೆ :** ಈ ಕೆಳಗಿನ ಲೆಕ್ಕಗಳನ್ನು ನೋಟ್‌ಪುಸ್ತಕದಲ್ಲಿ ಬರೆದುಕೊಂಡು ಮಾಡಿರಿ.

| | | |
|---|---|---|
| 36<br>- 13<br>____ | 18<br>- 14<br>____ | 15<br>- 12<br>____ |
| 44<br>- 22<br>____ | 38<br>- 16<br>____ | 24<br>- 12<br>____ |
| 17<br>- 12<br>____ | 39<br>- 16<br>____ | 28<br>- 16<br>____ |
| 36<br>- 11<br>____ | 19<br>- 16<br>____ | 17<br>- 2<br>____ |
| 25<br>- 12<br>____ | 32<br>- 11<br>____ | 16<br>- 16<br>____ |

28 - 16 = ☐

33 - 13 = ☐

17 - 10 = ☐

34 - 14 = ☐

32 - 11 = ☐

26 - 13 = ☐

30 - 10 = ☐

18 - 12 = ☐

29 - 18 = ☐

42 - 12 = ☐

32 - 12 = ☐

42 - 10 = ☐

3



# ಮೌಲ್ಯಮಾಪನ

## (ಮಿಶ್ರಕ್ರಿಯೆ ದಶಕ ರಹಿತ 1-50)

87

**ಸೂಚನೆ :** ಈ ಕೆಳಗಿನ ಲೆಕ್ಕಗಳನ್ನು ನೋಟ್‌ಪುಸ್ತಕದಲ್ಲಿ ಬರೆದುಕೊಂಡು ಮಾಡಿರಿ.

| | |
|---|---|
| 21 + 18 - 4 = ☐ | 12 + 14 - 4 = ☐ |
| 30 + 18 - 5 = ☐ | 15 + 11 - 3 = ☐ |
| 11 + 18 - 9 = ☐ | 22 + 14 - 5 = ☐ |
| 10 + 19 - 2 = ☐ | 32 + 16 - 6 = ☐ |
| 40 + 8 - 4 = ☐ | 16 + 13 - 9 = ☐ |
| 12 + 17 - 5 = ☐ | 28 + 10 - 8 = ☐ |
| 10 + 19 - 6 = ☐ | 15 + 14 - 3 = ☐ |
| 20 + 14 - 2 = ☐ | 22 + 16 - 5 = ☐ |
| 20 + 19 - 6 = ☐ | 35 + 14 - 0 = ☐ |
| 19 + 10 - 4 = ☐ | 10 + 18 - 6 = ☐ |
| 15 + 14 - 3 = ☐ | 9 + 9 - 8 = ☐ |
| 12 + 16 - 5 = ☐ | 35 + 12 - 3 = ☐ |

| 4  | # ಹಾಡು | 88 |
|---|---|---|

**ಸೂಚನೆ :** ಮಕ್ಕಳನ್ನು ವೃತ್ತಾಕಾರವಾಗಿ ನಿಲ್ಲಿಸಿ. ಈ ಹಂತಕ್ಕೆ ಬಂದ ಮಗುವಿಗೆ ಹೆಚ್ಚು ಗಮನ ಹರಿಸುತ್ತಾ, ಶಿಕ್ಷಕರು ಸರಳ ಅಭಿನಯದ ಮೂಲಕ ಹಾಡನ್ನು ಹೇಳಿಕೊಟ್ಟು ಹೇಳಿಸುವುದು.

ಹತ್ತರ ಜಾಗದಲ್ಯಾರೇ ನಿಲ್ಲಲಿ
ಅವರೇ ದೊಡ್ಡವರು

ಹತ್ತರ ಸ್ಥಾನದಲ್ಲಿದ್ದರೆ ತಂಗಿಯೂ
ಬೆಲೆಯಲಿ ದೊಡ್ಡವಳು
ಬಿಡಿಗಳ ಸ್ಥಾನದಲ್ಲಿದ್ದರೆ ಅಕ್ಕನೂ
ಬೆಲೆಯಲ್ಲಿ ಚಿಕ್ಕವಳೇ

ನಿಲ್ಲುವ ಜಾಗಕೆ ಅನುಗುಣವಾಗಿ
ಬೆಲೆಗಳ ಪಡೆಯುವರು
ಅದಲು ಬದಲು ಆದರೆ ಸಾಕು
ಬೆಲೆಗಳು ಬದಲುವವು

ಹತ್ತುಗಳೊಂದು ಬಿಡಿಗಳು ಆರು
ಅರಿದರೆ ಹದಿನಾರು
ಹತ್ತುಗಳಾರು ಬಿಡಿಗಳು ಒಂದು
ಅರಿದರೆ ಅರವತ್ತೊಂದು !

4

# ಸಂಕಲನ ದಶಕ ಸಹಿತ
## (1 ರಿಂದ 50)

89

**ಉದ್ದೇಶ** : 1 ರಿಂದ 50ರ ವರೆಗಿನ ಸಂಖ್ಯೆಗನ್ನು ಬಳಸಿ (ಮೊತ್ತ 50ಕ್ಕೆ ಮೀರದಂತೆ) ದಶಕ ರಹಿತ ಸಂಕಲನ ಮಾಡುವುದು.

**ಸಾಮಗ್ರಿ** : ಹತ್ತರ ಕಡ್ಡಿ ಕಟ್ಟುಗಳು, ಬಿಡಿಕಡ್ಡಿಗಳು 1 ರಿಂದ 50 ರವರೆಗಿನ ಮಿಂಚುಪಟ್ಟಿಗಳು.

**ಕಲಿಸುವ ಕ್ರಮ :**

**ಮಾದರಿ :**




| | ಹತ್ತು | ಬಿಡಿ |
|---|---|---|
| | 1 | - |
| + | 2<br>+1 | 8<br>4 |
| ಮೊತ್ತ | 4 | 2 |

ಬಿಡಿಗಳು : 8+4=12
1 ಹತ್ತು 2 ಬಿಡಿ

ಹತ್ತುಗಳು : 2+1+1=4
= 4 ಹತ್ತುಗಳು

ಮೊತ್ತ = 42
= 4 ಮತ್ತು 2 ಬಿಡಿ

**ಹಂತ 1 :** ಮೊದಲು ಬಿಡಿ ಕಡ್ಡಿಗಳಿಗೆ ಬಿಡಿ ಕಡ್ಡಿಗಳನ್ನು ಕೂಡಿಸಿದಾಗ ಬರುವ ಹನ್ನೆರಡು ಕಡ್ಡಿಗಳಲ್ಲಿ ಕಟ್ಟುಹಾಕಿ ಒಂದು ಹತ್ತರ ಕಟ್ಟು ಮಾಡುವುದು, ಉಳಿದ ಎರಡು ಬಿಡಿ ಕಡ್ಡಿಗಳನ್ನು ಸೂಚಿಸುವ ಅಂಕಿಯನ್ನು ಮೊತ್ತದಲ್ಲಿ ಸ್ಥಾನಕ್ಕನುಗುಣವಾಗಿ ಬರೆಯುವುದು.

**ಹಂತ 2 :** ಹತ್ತರ ಕಟ್ಟುಗಳನ್ನು ಕೂಡಿಸುವಾಗ, ಬಿಡಿ ಕಡ್ಡಿಗಳನ್ನು ಕೂಡಿದಾಗ ಬಂದ ಹತ್ತರ ಕಟ್ಟನ್ನೂ ಕೂಡಿಸಿಕೊಂಡು ಕೊಡಬೇಕು. ಬಂದ ಮೊತ್ತವನ್ನು ಸ್ಥಾನಕ್ಕನುಗುಣವಾಗಿ ಮೊತ್ತದಲ್ಲಿ ಬರೆಯುವುದು.

**ಸೂಚನೆ :** ಎರಡು ಸ್ಥಾನಗಳ ದಶಕ ಸಹಿತ ಸಂಕಲನದಲ್ಲಿ ಬಿಡಿ ಸ್ಥಾನದಲ್ಲಿನ ಅಂಕಿಗಳನ್ನು ಕೂಡಿದಾಗ ಬಂದ ಮೊತ್ತವು 10 ಅಥವಾ ಅದಕ್ಕಿಂತ ಹೆಚ್ಚಾದಾಗ ಆ ಸಂಖ್ಯೆಯ ಬಿಡಿಸ್ಥಾನವನ್ನು ಮೊತ್ತ (ಒಟ್ಟು) ದಲ್ಲಿ ಬರೆದು ಹತ್ತರ ಸ್ಥಾನದ ಅಂಕೆಯನ್ನು ಹತ್ತರ ಸ್ಥಾನಕ್ಕೆ ವರ್ಗಾಯಿಸಿ, ಅನಂತರ ಆ ಹತ್ತನ್ನು ಸೇರಿಸಿಕೊಂಡು ಹತ್ತುಗಳನ್ನು ಕೂಡಿಸಿ ಬಂದ ಮೊತ್ತವನ್ನು ಸ್ಥಾನಕ್ಕನುಗುಣವಾಗಿ ಬರೆಯುವುದನ್ನು ಹಲವು ಚಟುವಟಿಕೆಗಳ ಮೂಲಕ ಪುನರಾವರ್ತಿಸಿ ಮನದಟ್ಟು ಮಾಡಿಸುವುದು.

**ಶಿಕ್ಷಕರ ಗಮನಕ್ಕೆ :** ಶಿಕ್ಷಕರು ಈ ಹಂತಕ್ಕೆ ಬಂದ ವಿದ್ಯಾರ್ಥಿಗಳಿಗೆ ಹಲವು ಲೆಕ್ಕಗಳನ್ನು ನೋಟ್‌ಪುಸ್ತಕದಲ್ಲಿ ಮಾಡಿಸಿ ಕಲಿಕಾಂಶದ ಸಂಪೂರ್ಣ ಮನವರಿಕೆ ಮಾಡಿಸಿದ ನಂತರವೇ ಅಭ್ಯಾಸ ಚಟುವಟಿಕೆಯಲ್ಲಿ ತೊಡಗಿಸುವುದು.

| 4 | **ಮೌಖಿಕ ಲೆಕ್ಕಗಳು**<br>**(ದಶಕ ಸಹಿತ ಸಂಕಲನ)** | **94** |
|---|---|---|



**ಸೂಚನೆ :** ❖ ಶಿಕ್ಷಕರು ಸೂಚಿಸಿದ ವಿದ್ಯಾರ್ಥಿಯು ಈ ಹಂತಕ್ಕೆ ಬಂದಿರುವ ವಿದ್ಯಾರ್ಥಿಗೆ ಕೇಳಕಾಣಿಸಿದ ಒಂದೊಂದೇ ಪ್ರಶ್ನೆ ಕೇಳಿ ಉತ್ತರ ಪಡೆಯುವುದು.

1. ವಿಜಯನ ಮನೆಯಲ್ಲಿ 2 ಮಾವಿನ ಹಣ್ಣುಗಳಿದ್ದವು ಅವನ ಸ್ನೇಹಿತ ಗಂಗಣ್ಣ 28 ಮಾವಿನ ಹಣ್ಣುಗಳನ್ನು ತಂದುಕೊಟ್ಟನು. ಹಾಗಾದರೆ ವಿಜಯನ ಮನೆಯಲ್ಲಿರುವ ಮಾವಿನ ಹಣ್ಣುಗಳೆಷ್ಟು?
2. ಗೀತಾಳ ಮಾವ 22 ಬಿಸ್ಕತ್‌ಗಳನ್ನು ತಂದು ಕೊಟ್ಟರು, ಈ ಹಿಂದೆ ಗೀತಾಳ ಬಳಿ 8 ಬಿಸ್ಕತ್‌ಗಳಿದ್ದವು. ಈಗ ಆಕೆಯ ಬಳಿ ಇರುವ ಬಿಸ್ಕತ್‌ಗಳೆಷ್ಟು ?
3. ಮಹಮ್ಮದನು ತನ್ನ ತೋಟದಲ್ಲಿ 25 ಬಾಳೆಗಿಡಗಳನ್ನು ನೆಟ್ಟಿದ್ದರು. ಮತ್ತೆ ಹೊಸದಾಗಿ ಅನಿತಾಳು 19 ಬಾಳೆಗಿಡಗಳನ್ನು ಮಹಮ್ಮದ್‌ನಿಗೆ ತಂದುಕೊಟ್ಟಳು. ಹಾಗಾದರೆ ಮಹಮದ್‌ನ ತೋಟದಲ್ಲಿರುವ ಬಾಳೆಗಿಡಗಳೆಷ್ಟು ?

**ಶಿಕ್ಷಕರ ಗಮನಕ್ಕೆ :** ಇದೇ ರೀತಿ ಅನೇಕ ಪ್ರಶ್ನೆ ಕೇಳಿ ಉತ್ತರ ಪಡೆಯುವುದು.

4



# (+) ಆಟ

## ದಶಕ ಸಹಿತ ಸಂಕಲನ (1-50)

95

**ಆಟೋಪಕರಣಗಳ ಸಿದ್ಧತೆ :** 6 ಮುಖಗಳಿರುವ ಸಾಧಾರಣ ಅಳತೆಯ 2 ಡೈಸ್‌ಗಳನ್ನು ತೆಗೆದುಕೊಂಡು ಒಂದು ಡೈಸ್‌ನ 6 ಮುಖಗಳ ಮೇಲೆ 25, 18, 19, 29, 15, 28 ಎಂದು ಹಾಗೂ ಇನ್ನೊಂದು ಡೈಸ್‌ನ 6 ಮುಖಗಳಲ್ಲಿ 9, 15, 16, 17, 18, 19 ಎಂದು ಬರೆಯುವುದು.

**ಆಡಿಸುವ ಕ್ರಮ :**

1. ಇದು ಸಂಕಲನದ ಆಟವೆಂದು ಸೂಚನೆ ನೀಡಿ ಮಕ್ಕಳಿಗೆ ಡೈಸ್‌ಗಳನ್ನು ಕೊಡುವುದು.
2. ವಿದ್ಯಾರ್ಥಿ 2 ಡೈಸ್‌ಗಳನ್ನು ನೆಲದ ಮೇಲೆ ಬಿಟ್ಟು ಮೇಲ್ಮುಖವಾಗಿದ್ದ ಸಂಖ್ಯೆಗಳನ್ನು ತನ್ನ ನೋಟ್ ಪುಸ್ತಕದಲ್ಲಿ ಸಮಸ್ಯೆ ರೂಪದಲ್ಲಿ ಬರೆದುಕೊಂಡು ಮೊತ್ತ ಕಂಡು ಹಿಡಿಯಬೇಕು.
3. ಇದೇ ರೀತಿ ಈ ಹಂತಕ್ಕೆ ಬಂದ ವಿದ್ಯಾರ್ಥಿಗಳು ಸರದಿಯ ಪ್ರಕಾರ ಡೈಸ್‌ಗಳನ್ನು ಹಸ್ತಾನುಸರಿಸಿ ಪ್ರತಿಯೊಬ್ಬ ಆಟಗಾರನು ಚಟುವಟಿಕೆಯಲ್ಲಿ ಭಾಗವಹಿಸುವಂತೆ ಗಮನ ಹರಿಸುವುದು.

**ಶಿಕ್ಷಕರ ಗಮನಕ್ಕೆ :** ಈ ಆಟವನ್ನು ಕನಿಷ್ಠ ಇಬ್ಬರು, ಗರಿಷ್ಠ 5 ವಿದ್ಯಾರ್ಥಿಗಳು ಆಡಬಹುದು.

4



# ದಶಕ ಸಹಿತ ವ್ಯವಕಲನ
## (1 ರಿಂದ 50)

96

**ಉದ್ದೇಶ** : 1 ರಿಂದ 50 ರ ಸಂಖ್ಯೆಗಳನ್ನು ಬಳಸಿ (ವ್ಯತ್ಯಾಸ 50ಕ್ಕೆ ಮೀರದಂತೆ) ದಶಕ ಸಹಿತ ವ್ಯವಕಲನ ಮಾಡುವುದು.

**ಸಾಮಗ್ರಿ** : ಹತ್ತರ ಕಟ್ಟುಗಳು, ಬಿಡಿಕಡ್ಡಿಗಳು 1 ರಿಂದ 50 ರವರೆಗಿನ ಮಿಂಚುಪಟ್ಟಿಗಳು.

**ಕಲಿಸುವ ಕ್ರಮ :**




ಬಿಡಿಗಳನ್ನು ಕಳೆಯುವಾಗ 2 ರಿಂದ 6ನ್ನು ಕಳೆಯು ಸಾಧ್ಯವಾಗದ ಕಾರಣ 1 ಹತ್ತನ್ನು ಬಿಡಿ ಸ್ಥಾನಕ್ಕೆ ತರಬೇಕು.

1 ಹತ್ತನ್ನು ಬಿಡಿ ಸ್ಥಾನಕ್ಕೆ ತರಬೇಕು.

ಆಗ 10+ಬಿಡಿಸ್ಥಾನದಲ್ಲಿ 2 ಸೇರಿದಾಗ 12 ಆಗುತ್ತದೆ. 12ರಲ್ಲಿ ರನ್ನು ಕಳೆಯಬೇಕು.

12−6 = 6

ಹತ್ತರ ಸ್ಥಾನದಲ್ಲಿ 3 ಹತ್ತುಗಳಿದ್ದವು (1 ಹತ್ತನ್ನು ಬಿಡಿಸ್ಥಾನಕ್ಕೆ ತೆಗೆಯಲಾಗಿದೆ) 2 ಹತ್ತುಗಳು ಉಳಿದವು. ಈಗ 2 ಹತ್ತುಗಳಲ್ಲಿ 1 ಹತ್ತು ಕಳೆದಾಗ 1 ಹತ್ತು ಉಳಿಯುತ್ತದೆ. ಅಂದರೆ 32ರಲ್ಲಿ 16ನ್ನು ಕಳೆದಾಗ 16 ಬರುತ್ತದೆ.

**ಹಂತ 1 :** ಮೇಲ್ಕಂಡ ಸಮಸ್ಯೆಯಲ್ಲಿ 32 ರಿಂದ 16 ಕಳೆದಾಗ ಎಷ್ಟು ಬರುತ್ತದೆ. ಎಂದು ಸಮಸ್ಯೆಯ ಅರ್ಥವನ್ನು ಹೇಳುವುದು. ಹೆಚ್ಚಿನ ಬೆಲೆಯ (ಯಾವುದರಿಂದ ಕಳೆಯುತ್ತೇವೆಯೋ) ಸಂಖ್ಯೆಗೆ ಸಮನಾದ ಹತ್ತರ ಕಟ್ಟು ಹಾಗೂ ಬಿಡಿ ಕಡ್ಡಿಗಳನ್ನಿಡುವುದು.

**ಹಂತ 1 :** 2 ಬಿಡಿ ಕಡ್ಡಿಗಳಿಂದ 6 ಬಿಡಿ ಕಡ್ಡಿಗಳನ್ನು ಹೊರತೆಗೆಯಬೇಕು. ಇರುವುದು ಎರಡೇ ಬಿಡಿಕಡ್ಡಿಗಳು ಆದ್ದರಿಂದ ಹತ್ತರ ಸ್ಥಾನದಲ್ಲಿರುವ ಮೂರು ಕಂತುಗಳಿಂದ 1 ಕಟ್ಟನ್ನು ಬಿಡಿಸ್ಥಾನಕ್ಕೆ ತಂದು ಕಟ್ಟನ್ನು ಬಿಚ್ಚುವುದು. ಈಗ ಒಟ್ಟು 12 ಬಿಡಿಗಳಾದವು 12 ಬಿಡಿಗಳಿಂದ 6 ಬಿಡಿಗಳನ್ನು ಹೊರತೆಗೆದರೆ ಇನ್ನು 6 ಬಿಡಿಕಡ್ಡಿಗಳು ಉಳಿಯುವುವು ಉಳಿದ ಬಿಡಿಕಡ್ಡಿಗಳು ಸೂಚಿಸುವ ಅಂಕಿಯನ್ನು ಸ್ಥಾನಕ್ಕನುಗುಣವಾಗಿ ವ್ಯತ್ಯಾಸದಲ್ಲಿ (ಉತ್ತರದ ಭಾಗದಲ್ಲಿ) ಬರೆಯುವುದು.

**ಹಂತ 1 :** ಹತ್ತರ ಸ್ಥಾನದಲ್ಲಿರುವ ಉಳಿದ 2 ಕಟ್ಟುಗಳಲ್ಲಿ (ಒಂದು ಕಟ್ಟು ಬಿಡಿಸ್ಥಾನಕ್ಕೆ ವರ್ಗಾಯಿಸಿದೆ) 1 ಕಟ್ಟನ್ನು ತೆಗೆದುಹಾಕಿ ಉಳಿದ ಕಟ್ಟುಗಳನ್ನು ಸೂಚಿಸುವ ಅಂಕಿಯನ್ನು ಸ್ಥಾನಕ್ಕನುಗುಣವಾಗಿ ವ್ಯತ್ಯಾಸದಲ್ಲಿ ಬರೆಯುವುದು.

**ಶಿಕ್ಷಕರ ಗಮನಕ್ಕೆ :** ಮೇಲೆ ನೀಡಿರುವ ಕಲಿಸುವ ಕ್ರಮದಂತೆ ವಿದ್ಯಾರ್ಥಿಗೆ ಅನೇಕ ಲೆಕ್ಕಗಳನ್ನು ನೋಟ್‌ಪುಸ್ತಕದಲ್ಲಿ ಮಾಡಿಸಿ ಕಲಿಕಾಂಶದ ಸಂಪೂರ್ಣ ಮನವರಿಕೆ ಮಾಡಿಸಿದ ನಂತರವೇ ಅಭ್ಯಾಸ ಚಟುವಟಿಕೆಯಲ್ಲಿ ತೊಡಗಿಸುವುದು.

4



# ಮೌಖಿಕ ಲೆಕ್ಕಗಳು
## (ದಶಕ ಸಹಿತ ವ್ಯವಕಲನ)

**100**

**ಸೂಚನೆ :**

- ✥ ಶಿಕ್ಷಕರು ಸೂಚಿಸಿದ ವಿದ್ಯಾರ್ಥಿಯು ಈ ಹಂತಕ್ಕೆ ಬಂದಿರುವ ವಿದ್ಯಾರ್ಥಿಗೆ ಕೆಳಕಾಣಿಸಿದ ಒಂದೊಂದೇ ಪ್ರಶ್ನೆಕೇಳಿ ಉತ್ತರ ಪಡೆಯುವುದು.
- ✥ ಉತ್ತರಗಳು ಸರಿ/ತಪ್ಪು ಇದ್ದಾಗ್ಯೂ ಶಿಕ್ಷಕರಿಗೆ ವಾದಿ ಮಾಡುವುದು.
- ✥ ಶಿಕ್ಷಕರು ಈ ಹಂತಕ್ಕೆ ಬಂದ ಮಗುವಿಗೆ ಕೆಳಗಿನ ಒಂದೊಂದೇ ಪ್ರಶ್ನೆಗಳನ್ನು ಕೇಳುತ್ತಾ ಉತ್ತರ ಪಡೆಯುವುದು.

1. ರಾಜಣ್ಣನ ಬಳಿ 34 ಬಳಪಗಳಿದ್ದವು, 15 ಬಳಪಗಳನ್ನು ಬರೆದು ಮುಗಿಸಿದರೆ ಈಗ ಅವನ ಬಳಿ ಉಳಿದ ಬಳಪಗಳೆಷ್ಟು ?
2. ರಾಮನು ಸಂತೆಯಿಂದ 26 ಮಡಿಕೆಗಳನ್ನು ತಂದನು. ಅವುಗಳಲ್ಲಿ 18 ಮಡಿಕೆಗಳು ಒಡೆದು ಹೋದರೆ ಅವನಲ್ಲಿ ಉಳಿದ ಮಡಿಕೆಗಳೆಷ್ಟು ?
3. ಸೋಮನು 30 ತೆಂಗಿನ ಕಾಯಿಗಳಲ್ಲಿ 16 ತೆಂಗಿನ ಕಾಯಿಗಳನ್ನು ಮಾರಿದನು. ಈಗ ಅವನ ಬಳಿ ಉಳಿದಿರುವ ತೆಂಗಿನ ಕಾಯಿಗಳೆಷ್ಟು ?
4. ಮೇರಿಯು ತನ್ನ ಹುಟ್ಟುಹಬ್ಬಕ್ಕೆ 42 ಕೇಕುಗಳನ್ನು ತಂದು, 36 ಕೇಕುಗಳನ್ನು ತನ್ನ ಗೆಳತಿಯರಿಗೆ ಹಂಚಿದರೆ ಉಳಿದ ಕೇಕುಗಳೆಷ್ಟು ?

**ಶಿಕ್ಷಕರ ಗಮನಕ್ಕೆ :** ಇದೇ ರೀತಿ ಅನೇಕ ಪ್ರಶ್ನೆಗಳನ್ನು ಕೇಳಿ ಮಕ್ಕಳಿಂದ ಉತ್ತರ ಪಡೆಯುವುದು.

4



# ಆಟ
## (ದಶಕ ಸಹಿತ ವ್ಯವಕಲನ)

101

**ಸಾಮಗ್ರಿ** : + ಆಟದಲ್ಲಿ ಬಳಸಿರುವ ಡೈಸ್‌ಗಳನ್ನು ಬಳಸುವುದು.

**ಆಟ ಆಡುವ ಕ್ರಮ :**

1. ಇದು ವ್ಯವಕಲನದ ಆಟ. ಈ ಆಟದಲ್ಲಿ ಮೇಲ್ಮುಖವಾಗಿ ಬಿದ್ದ ಸಂಖ್ಯೆಗಳಲ್ಲಿ ಹೆಚ್ಚು ಬೆಲೆಯ ಸಂಖ್ಯೆಯಿಂದ ಕಡಿಮೆ ಬೆಲೆಯ ಸಂಖ್ಯೆಗಳನ್ನು ಕಳೆಯಬೇಕು ಎಂದು ಸೂಚನೆ ನೀಡಿ ಡೈಸ್‌ಗಳನ್ನು ನೀಡುವುದು.
2. ವಿದ್ಯಾರ್ಥಿ ಎರಡು ಡೈಸ್‌ಗಳನ್ನು ನೆಲದ ಮೇಲೆ ಬಿಟ್ಟು ಮೇಲ್ಮುಖವಾಗಿ ಬಿದ್ದ ಸಂಖ್ಯೆಯಲ್ಲಿ ಹೆಚ್ಚು ಬೆಲೆಯ ಸಂಖ್ಯೆಯಿಂದ ಕಡಿಮೆ ಬೆಲೆಯ ಸಂಖ್ಯೆಯನ್ನು ಕಳೆಯಲು ಅನುಕೂಲವಾಗುವಂತೆ ಸಮಸ್ಯೆಯನ್ನು ನೋಟ್‌ಪುಸ್ತಕದಲ್ಲಿ ಬರೆದುಕೊಂಡು ಉತ್ತರ ಕಂಡುಹಿಡಿಯುವುದು.
3. ಇದೇ ರೀತಿ ಸರದಿಯ ಪ್ರಕಾರ ಡೈಸ್‌ಗಳನ್ನು ಹಸ್ತಾಂತರಿಸಿ ಈ ಹಂತಕ್ಕೆ ಬಂದ ವಿದ್ಯಾರ್ಥಿಗಳು ಚಟುವಟಿಕೆಯಲ್ಲಿ ಭಾಗವಹಿಸುವಂತೆ ಗಮನ ಹರಿಸುವುದು.

**ಶಿಕ್ಷಕರ ಗಮನಕ್ಕೆ :** ಈ ಆಟವನ್ನು ಕನಿಷ್ಠ ಇಬ್ಬರು ಗರಿಷ್ಠ 5 ವಿದ್ಯಾರ್ಥಿಗಳು ಆಡಬಹುದು.

4

+ -
X ÷

# ಮಿಶ್ರಕ್ರಿಯೆ ದಶಕ ಸಹಿತ
## (1 ರಿಂದ 50)

102

**ಉದ್ದೇಶ** : ಸಂಕಲನ ಮತ್ತು ವ್ಯವಕಲನಗಳನ್ನೊಳಗೊಂಡ ಮಿಶ್ರಕ್ರಿಯೆಯನ್ನು ಅಭ್ಯಾಸ ಮಾಡುವುದು.

**ಸಾಮಗ್ರಿ** : ಸಂಖ್ಯೆಗಳ ಮಿಂಚುಪಟ್ಟಿಗಳು, +, – ಚಿಹ್ನೆಗಳು, ಹತ್ತರ ಕಟ್ಟುಗಳು ಮತ್ತು ಬಿಡಿಕಡ್ಡಿಗಳು

**ಕಲಿಸುವ ಕ್ರಮ :**

25 + 16 – 15 ಈ ಸಮಸ್ಯೆಯನ್ನು ಬರೆಸುವುದು ಕೆಳಕಂಡಂತೆ ಪ್ರಶ್ನಿಸುತ್ತ ಈ ಸಮಸ್ಯೆಯನ್ನು ಅರ್ಥೈಸುವುದು.

- ಈ ಸಮಸ್ಯೆಯನ್ನು ವಿದ್ಯಾರ್ಥಿಗಳಿಂದ ಹೇಳಿಸುವುದು.
- ಇಲ್ಲಿ ಬಳಕೆಯಾಗಿರುವ ಚಿನ್ಹೆಗಳು ಯಾವುವು ಎಂದು ಪ್ರಶ್ನಿಸಿ ಉತ್ತರ ಪಡೆಯುವುದು.
- + ಮತ್ತು – ಚಿಹ್ನೆಯನ್ನು ಆಧರಿಸಿ ಮಾಡಬೇಕಾದ ಕ್ರಿಯೆಯನ್ನು ಹೇಳಿಸುವುದು.
- 2 ಕ್ರಿಯೆಗಳಲ್ಲಿ ಮೊದಲು ಯಾವ ಕ್ರಿಯೆ ಮಾಡಬೇಕು. ನಂತರ ಯಾವ ಕ್ರಿಯೆ ಮಾಡಬೇಕು ಎಂಬುದನ್ನು ಮಗುವಿನಿಂದ ಹೇಳಿಸುವುದು.

### ಕೆಳಕಂಡ ಹಂತಗಳಿಂದ ಕ್ರಿಯೆ ಮಾಡಿಸುವುದು.

- ಸಂಕಲನ ಮಾಡಬೇಕಾದರೆ ಯಾವ ಯಾವ ಸಂಖ್ಯೆಗಳನ್ನು ಒಟ್ಟು ಮಾಡಬೇಕೆಂದು ಪ್ರಶ್ನಿಸಿ ಕ್ರಿಯೆ ಮಾಡಿಸುವುದು.

  25+16=41

- ನಂತರ ಯಾವ ಕ್ರಿಯೆ ಮಾಡಬೇಕು ಎಂದು ಪ್ರಶ್ನಿಸಿ ಮುಂದಿನ ಹಂತದಲ್ಲಿ ಮನವರಿಕೆ ಮಾಡುವುದು. (ಸಂಕಲನ ಮಾಡಿದಾಗ ಬಂದ ಉತ್ತರದಿಂದ ಕೊಟ್ಟಿರುವ ಸಂಖ್ಯೆಯನ್ನು ಕಳೆಯಬೇಕು)

  41–15=26

- ಕ್ರಿಯೆ ಮಾಡಿಸಿದ ನಂತರ ಬಂದ ಉತ್ತರವನ್ನು ಸಮಸ್ಯೆ ಮುಂದೆ ನೀಡಿ ಖಾಲಿ ಚೌಕದಲ್ಲಿ ಬರೆಸುವುದು.

**ಶಿಕ್ಷಕರ ಗಮನಕ್ಕೆ :** 1) ಮಗು ಚಟುವಟಿಕೆ ಮಾಡಲು ಅಗತ್ಯವಿದ್ದಲ್ಲಿ ಕಡ್ಡಿ /ಕಲ್ಲು / ಮಣಿ ಬಳಸಿ ಲೆಕ್ಕ ಮಾಡಿಸುವುದು.

2) ಬೇರೆ ಬೇರೆ ಸಮಸ್ಯೆಗಳನ್ನು ನೀಡಿ ಮಗು ಸ್ವತಂತ್ರವಾಗಿ ಸಮಸ್ಯೆ ಬಿಡಿಸಲು ಅಣಿಗೊಳಿಸುವುದು.

4



# ಆಟ

## ಮಿಶ್ರಕ್ರಿಯೆ ದಶಕ ಸಹಿತ (1 ರಿಂದ 50)

**104**

**ಆಟೋಪಕರಣಗಳ ಸಿದ್ಧತೆ :** 6 ಮುಖಗಳುಳ್ಳ ಸಾಧಾರಣ ಅಳತೆಯ 2 ಬಿಳಿ ಬಣ್ಣದ ಮತ್ತು 1 ಹಳದಿ ಬಣ್ಣದ ಡೈಸನ್ನು ತೆಗೆದುಕೊಂಡು ಬಿಳಿ ಬಣ್ಣದ 1 ಡೈಸ್‌ನ್ನು 6 ಮುಖಗಳ ಮೇಲೆ 25, 18, 19, 29, 15, 28 ಎಂದು ಮತ್ತೊಂದು ಬಿಳಿ ಬಣ್ಣದ ಡೈಸ್‌ನ್ನು 6 ಮುಖಗಳ ಮೇಲೆ 9, 15, 16, 17, 18, 19 ಎಂದು ಬರೆಸುವುದು. ಇದೇ ರೀತಿ ಹಳದಿ ಬಣ್ಣದ ಡೈಸ್‌ನ್ನು ಮೇಲೆ 4, 5, 6, 7, 8, 9 ಎಂದು ಬರೆಯುವುದು.

**ಆಡಿಸುವ ಕ್ರಮ :**

1. ಇದು ಸಂಕಲನದ ಮತ್ತು ವ್ಯವಕಲನದ ಮಿಶ್ರಕ್ರಿಯೆಯ ಆಟ ಎಂದು ಮಕ್ಕಳಿಗೆ ಸೂಚನೆ ನೀಡುವುದು.
2. 2 ಬಿಳಿ ಮತ್ತು 1 ಹಳದಿ ಬಣ್ಣದ 3 ಡೈಸ್‌ಗಳನ್ನು ಏಕಕಾಲದಲ್ಲಿ ನೆಲದ ಮೇಲೆ ಬಿಟ್ಟು ಬಿಳಿ ಬಣ್ಣದ ಡೈಸ್‌ಗಳ ಮೇಲಿನ ಸಂಖ್ಯೆಗಳನ್ನು ಕೂಡಬೇಕೆಂದು ಆ ಮೊತ್ತದಿಂದ ಹಳದಿ ಬಣ್ಣದ ಡೈಸ್‌ನಲ್ಲಿ ಇರುವ ಸಂಖ್ಯೆಯನ್ನು ಕಳೆಯಬೇಕೆಂದು ಆಟಗಾರರಿಗೆ ಸೂಚನೆ ನೀಡಬೇಕು.
3. ಇದೇ ರೀತಿ ಸರದಿ ಪ್ರಕಾರ ಡೈಸ್‌ಗಳನ್ನು ಹಸ್ತಾಂತರಿಸಿ ಪ್ರತಿಯೊಬ್ಬ ಆಟಗಾರನು ಚಟುವಟಿಕೆಯಲ್ಲಿ ಭಾಗವಹಿಸುವಂತೆ ಗಮನ ಹರಿಸುವುದು.

**ಶಿಕ್ಷಕರ ಗಮನಕ್ಕೆ :** ಈ ಆಟವನ್ನು ಕನಿಷ್ಠ 2 ಗರಿಷ್ಠ 5 ಮಕ್ಕಳು ಆಡಬಹುದು.

4



# ಮೌಲ್ಯಮಾಪನ
## (ಸಂಕಲನ ದಶಕ ರಹಿತ) (1 ರಿಂದ 50)

**105**

**ಸೂಚನೆ :** ಈ ಕೆಳಗಿನ ಲೆಕ್ಕಗಳನ್ನು ನೋಟ್‌ಪುಸ್ತಕದಲ್ಲಿ ಬರೆದುಕೊಂಡು ಮಾಡಿರಿ.

| | | |
|---|---|---|
| 14<br>+ 16<br>____ | 15<br>+ 26<br>____ | 28 + 16 = ☐<br>15 + 26 = ☐ |
| 17<br>+ 14<br>____ | 18<br>+ 16<br>____ | 17 + 14 = ☐<br>14 + 19 = ☐ |
| 27<br>+ 18<br>____ | 13<br>+ 19<br>____ | 18 + 28 = ☐<br>19 + 29 = ☐ |
| 23<br>+ 19<br>____ | 29<br>+ 12<br>____ | 17 + 17 = ☐<br>29 + 13 = ☐ |
| 24<br>+ 19<br>____ | 27<br>+ 15<br>____ | 15 + 28 = ☐<br>19 + 26 = ☐ |
| 17<br>+ 29<br>____ | 18<br>+ 19<br>____ | 19 + 27 = ☐<br>17 + 19 = ☐ |

4 

# ಮೌಲ್ಯಮಾಪನ

## (ವ್ಯವಕಲನ ದಶಕ ಸಹಿತ) (1 ರಿಂದ 50)

**106**

**ಸೂಚನೆ :** ಈ ಕೆಳಗಿನ ಲೆಕ್ಕಗಳನ್ನು ನೋಟ್‌ಪುಸ್ತಕದಲ್ಲಿ ಬರೆದುಕೊಂಡು ಲೆಕ್ಕ ಮಾಡಿರಿ.

| | | |
|---|---|---|
| 36 - 13 = ____ | 34 - 18 = ____ | 35 - 19 = ____ |
| 31 - 12 = ____ | 27 - 18 = ____ | 36 - 28 = ____ |
| 35 - 17 = ____ | 25 - 17 = ____ | 24 - 18 = ____ |
| 30 - 18 = ____ | 31 - 16 = ____ | 28 - 19 = ____ |
| 22 - 14 = ____ | 34 - 9 = ____ | 27 - 8 = ____ |

25 - 19 = ☐

32 - 18 = ☐

31 - 15 = ☐

33 - 18 = ☐

27 - 19 = ☐

22 - 18 = ☐

24 - 16 = ☐

25 - 17 = ☐

36 - 28 = ☐

4 

# ಮೌಲ್ಯಮಾಪನ

## ಮಿಶ್ರಕ್ರಿಯೆ ದಶಕ ಸಹಿತ (1 ರಿಂದ 50)

**107**

**ಸೂಚನೆ :** ಈ ಕೆಳಗಿನ ಲೆಕ್ಕಗಳನ್ನು ನೋಟ್‌ಪುಸ್ತಕದಲ್ಲಿ ಬರೆದುಕೊಂಡು ಲೆಕ್ಕ ಮಾಡಿರಿ.

| | |
|---|---|
| 18 + 15 - 6 = ☐ | 15 + 15 - 1 = ☐ |
| 12 + 19 - 4 = ☐ | 33 + 28 - 5 = ☐ |
| 25 + 16 - 6 = ☐ | 48 + 16 - 6 = ☐ |
| 28 + 12 - 2 = ☐ | 39 + 19 - 9 = ☐ |
| 16 + 18 - 7 = ☐ | 23 + 38 - 4 = ☐ |
| 15 + 27 - 5 = ☐ | 19 + 24 - 6 = ☐ |
| 37 + 14 - 3 = ☐ | 16 + 26 - 8 = ☐ |
| 25 + 17 - 4 = ☐ | 17 + 14 - 7 = ☐ |
| 12 + 29 - 8 = ☐ | 33 + 17 - 5 = ☐ |